ಗಾಂಧಿ ರೀತಿ.

ಅ ಮಂ ಗ ಲ

ನೋಡೆನು. ಕೇಳೆನು. ನುಡಿಯೆನು.



ಲೇಖಕ:

ಪುಟ್ಟಪ್ಪಯ್ಯ ಕಾರಂತ,
ಪೆರೋಡಿ.

ಗಾಂಧಿ ರೀತಿ.

ಲಘುಬರಹ ಮಾಲೆಯ ಮೊದಲನೆಯ ಬರಹ.

ಬಿಡಿಪ್ರತಿ 0—6—0. ವಾರ್ಷಿಕ ಚಂದಾ 2—0—0.


ಲೇಖಕ:

ಪಿ. ಪಿ. ಕಾರಂತ.

ಪ್ರಕಾಶಕರು:

ಅಜಂತ ಮುದ್ರಣ ಮತ್ತು ಪ್ರಕಾಶನ ಲಿಮಿಟೆಡ್,

ಕುಂದಾಪುರ.



—ಮುನ್ನುಡಿ—

"ಗಾಂಧಿಯವರು ಯುಗಪುರುಷರು, ಮಹಾತ್ಮರು: ಮಹಾಪುರುಷರನ್ನು ನೆನೆದು ನಮ್ಮ ಈ 'ಲಘುಬರಹ ಮಾಲೆ'ಯು ಕಾಲಿರಿಸಲಿ" ಎಂದು ಮಿತ್ರರಾದ ಶ್ರೀ ಸರ್ವೋತ್ತಮ ಹೆಬ್ಬಾರರು ಸೂಚಿಸಿದರು. "ಆಗಲಿ" ಎಂದು ನಾನು ಈ 'ಗಾಂಧಿ ರೀತಿ'ಯನ್ನು ಬರೆಯತೊಡಗಿದೆ.

ಗಾಂಧಿ ವಾದವನ್ನು ಹೇಳಲು ಹೊರಟವನು ನಾನು, ಕಿರಿಯರ ಮಟ್ಟವನ್ನು ನೆನೆದು 'ಗಾಂಧಿ ರೀತಿ'ಗೆ ತಿರುಗಿದೆ. ನಮ್ಮ ಮಾಲೆಯ 'ಲಘು' ಮಿತಿಯನ್ನು ನೆನೆದು ಲಘು ಪರಿಚಯ ಕೊಡುವುದರಲ್ಲೇ ತೃಪ್ತಿಗೊಂಡೆ. ಈ ಲಘುಪರಿಚಯವನ್ನು ಕೊಡುವ ನನ್ನ ಈ ರೀತಿಯು ಲಘುವಾಗಿ ನಿಮಗೆ ಕಂಡು ಬಂದರೆ ನನ್ನ ಶ್ರಮ ಸಾರ್ಥಕ.

ಬರೆಯುದ ಕೈ ನನ್ನದು; ಆದರೂ ಬರೆಯಬಲ್ಲೆನೆಂಬ ವಿಶ್ವಾಸದಿಂದ ಬರೆಯ ತೊಡಗಿದ್ದೇನೆ. 'ಲಘು ಬರಹ ಮಾಲೆ'ಗಾಗಿ ಬರೆದು ನನ್ನ ಈ ಲಘು ಕೃತಿಯನ್ನು ಲಘು ಎಂದು ಕಡೆಗಣಿಸದಿರಿ ಎಂದೇ ನನ್ನ ಕೋರಿಕೆ.

ನನ್ನ ಈ ಪ್ರಯತ್ನದಲ್ಲಿ ಹಲವು ಮಿತ್ರರು ನೆರವಿಗೆ ಬಂದರು. ಅಜಂತ ಪ್ರೆಸ್ಸಿನ ಮೆನೇಜರ್ ಶ್ರೀ ಸರ್ವೋತ್ತಮ ಹೆಬ್ಬಾರರು ಸಮಯಕ್ಕೆ ಸರಿಯಾಗಿ ಮುದ್ರಿಸಿ ಪ್ರಕಟಿಸಿದರು. ಶ್ರೀ ಬಿ.ಪಿ. ಬಾಯರಿಯವರು ಮುಖ ಚಿತ್ರವನ್ನು ಬರೆದರು; ಅಲ್ಲದೆ ಕರಡು ಪ್ರತಿಗಳನ್ನು ಓದಿ, ತಿದ್ದಿ, ತನ್ನದೇ ಎಂಬ ಹಾಗೆ ಆಸ್ಥೆ ತೋರಿದರು. ಶ್ರೀ ಸುಬ್ರಾಯ ಉರಾಳರು ಮತ್ತು ಶ್ರೀ ಕಟೀಲ್ ನಾರಾಯಣ ಪೈಗಳು ಸಲಹೆ, ಸೂಚನೆಗಳನ್ನಿತ್ತರು; ಅಲ್ಲದೆ ಬೇಕುಬೇಕಾದ ಪುಸ್ತಕಗಳನ್ನು ಒದಗಿಸಿ ಕೊಟ್ಟರು. ಇವರೆಲ್ಲರಿಗೂ ನಾನು ಋಣಿ.

ಕುಂದಾಪುರ,
10–10–1951.

ಪುಟ್ಟಪ್ಪಯ್ಯ ಕಾರಂತ, ಪೆರೋಡಿ.

—ಪ್ರಕಾಶಕರ ಮಾತು—

ಈ 'ಗಾಂಧಿ ರೀತಿ' 'ಲಘುಬರಹ ಮಾಲೆ'ಯ ಮೊದಲನೆಯ ಬರಹ. ಈ ವಿಜಯ ದಶಮಿಯಿಂದ ಮೊದಲ್ಗೊಂಡು ಒಂದು ವರ್ಷದ ಅವಧಿಯಲ್ಲಿ ಆರು ಚಿಕ್ಕ ಪುಸ್ತಕಗಳನ್ನು (ಒಟ್ಟು ಸುಮಾರು ಇನ್ನೂರು ಪುಟಗಳಷ್ಟು) ಪ್ರಕಟಿಸಬೇಕೆಂಬ ಸಂಕಲ್ಪ ಇದೆ. ಕಿರಿಯರಿಗಾಗಿ ಹೊರಟ ಈ ಬರಹ ಮಾಲೆಯಲ್ಲಿ ವಿಷಯವು ಹಿರಿದಾಗಿದ್ದರೂ ಕಿರಿಯರ ಮಟ್ಟಕ್ಕೆ ಇಳಿಸಬೇಕು, ಕಿರಿಕಿಸೆಗೂ ಎಟಕುವಂತಿರಬೇಕು ಎಂಬುದು ನಮ್ಮ ಉದ್ದೇಶ. ಅಂತೆಯೇ ಚಂದಾ ಹಣ ಕೇವಲ ಎರಡು ರೂಪಾಯಿಗಳು.

ಈ ರಂಗದಲ್ಲಿ ನಾವು ಹೊಸಬರು. ಅರಿವಿನ ಆರಾಧಕರಾದ ಗೆಳೆಯರ ಉದಾರ ಆಶ್ರಯ ಮತ್ತು ಪ್ರೋತ್ಸಾಹವನ್ನು ಹಾರೈಸಿ ನಾವು ಈ ರಂಗದಲ್ಲಿ ಕಾಲಿರಿಸಿರುವೆವು. ನಮ್ಮ ಪ್ರಗತಿಯು ಸಹೃದಯರಾದ ನಿಮ್ಮ ಔದಾರ್ಯವನ್ನು ಹೊಂದಿಕೊಂಡಿದೆ.

ಈ 'ಗಾಂಧಿ ರೀತಿ'ಯು ಒಂದು ಚಿಕ್ಕ ಹೊತ್ತಿಗೆಯಂತೆ ಕಂಡರೂ ಗಹನ ವಿಚಾರದಿಂದ ತುಂಬಿದೆ. ಗಾಂಧಿವಾದವು ಒಂದು ಹಿರಿದಾದ ವಿಷಯ. ಅದನ್ನು ಆದಷ್ಟು ತಿಳಿ ಭಾಷೆಯಲ್ಲಿ ಸುಗಮವಾಗಿ ಶ್ರೀ ಕಾರಂತರು ಚರ್ಚಿಸಿದ್ದಾರೆ. 'ಬರೆಯದ' ಅವರ ಕೈಯು ಇನ್ನೂ ಹೆಚ್ಚಿಗೆ ಬರೆಯಲಿ ಎಂದು ಆಶಿಸುತ್ತೇವೆ.

ಗಾಂಧೀಜಿಯವರ ಪಡಿಯಚ್ಚು ಎರವಿತ್ತ ನವಭಾರತ ಪ್ರೆಸ್ಸಿನ ಮಾಲಿಕರಿಗೆ ಕೃತಜ್ಞರಿರುವೆವು.

ನಮ್ಮ ಮುಂದಿನ ಪುಸ್ತಕ: ಶ್ರೀ ಸುಬ್ರಾಯ ಉರಾಳರ **"ವಿಶ್ವಬಂಧು ನೆಹರು".**

ಕುಂದಾಪುರ,
10-10-1951.

ಪ್ರಕಾಶಕರು.

ನನ್ನನ್ನು ಸೆರೆಹಿಡಿದ ಗಾಂಧಿರೀತಿ.

ನಿಮಗೆ ಸ್ವತಂತ್ರ ಭಾರತದಲ್ಲಿ ಬೆಳೆದು ಬಾಳುವ ಭಾಗ್ಯ. ನಮಗೆ ಗಾಂಧಿಯವರ ಸಮಕಾಲೀನರಾಗಿ ಬಾಳುವ ಭಾಗ್ಯ. ಈ ಎರಡು ಭಾಗ್ಯಗಳು ನಮ್ಮ ಮತ್ತು ನಿಮ್ಮ ಜೀವನದಲ್ಲಿ ಕೂಡಿ ಬರುತ್ತಿದ್ದರೆ ಏನು ಮಹಾ ಸೌಭಾಗ್ಯ ತುಂಬಿ ಬರುತ್ತಿತ್ತೊ?

ಗಾಂಧಿಯವರ ಸಮಕಾಲೀನರಾಗಿ ಬಾಳುವುದು ಏನು ಮಹಾ ಸೌಭಾಗ್ಯವಪ್ಪ ಎಂದು ನೀವು ಸಂದೇಹಪಡುತ್ತಿದ್ದೀರಿ. ನಿಮಗೇನು ಗೊತ್ತು ಗಾಂಧಿಯವರ ಆ ಅದ್ಭುತ ಶಕ್ತಿಯ ಮಹಿಮೆ! ಸ್ವತಃ ಅನುಭವದಿಂದ ಮಾತ್ರ ಅದನ್ನು ತಿಳಿಯಲು ಸಾಧ್ಯ. ನನ್ನ ಅಥವಾ ಇತರರ ಮಾತು ಕೇಳಿಯಾ ಓದಿ ತಿಳಿಯುವ ನಿಮಗೆ ಆ ಮಹಿಮೆಯ ನೆಲೆ ಸಿಕ್ಕದು.

ಇಲ್ಲಿ ಕೇಳಿ. 1921-22ನೇ ಇಸವಿ. ಗಾಂಧಿಯವರ ಅಸಹಕಾರ ಚಳವಳಿಯ ಗಾಳಿ ದೇಶದಲ್ಲೆಲ್ಲ ಬೀಸತೊಡಗಿತ್ತು. ಏನೋ ಶಕ್ತಿ (ಅಥವಾ 'ಹುಚ್ಚು' ಎಂದು ಹೇಳಿ) ಆ ಗಾಳಿಯಲ್ಲಿ ಸೇರಿತ್ತು. ಬೀಸಿದಲ್ಲೆಲ್ಲ ಜನರು ಮರುಳುಗೊಳ್ಳುತ್ತಿದ್ದರು. ನನಗೂ ಆ ಗಾಳಿ ತಾಗಿತು. ನಾನೂ ಹುಚ್ಚುಗೊಂಡೆ. ನಾಲ್ಕೋ, ಐದೋ ಕ್ಲಾಸಿನಲ್ಲಿದ್ದೆ ಆಗ. ಸರಕಾರಿ ಶಾಲೆ ಬಿಟ್ಟು ಗಾಂಧಿ ಶಾಲೆ ಸೇರಿದೆ. ಇಂಗ್ಲಿಷ್ ಕಲಿಯುವುದು ಬಿಟ್ಟು ನಾಗರಿ ಕಲಿಯ ತೊಡಗಿದೆ. ನನ್ನದು ಒಂದು ಕಪ್ಪು ಜರಿ ಟೊಪ್ಪಿ ಇತ್ತು. ವಿದೇಶಿ ಬಟ್ಟೆ ಸುಡುವ ಕುಂಡಕ್ಕೆ ಅದನ್ನು ಎಸೆದು ಬಿಟ್ಟು ಬಿಳಿ ಗಾಂಧಿಟೋಪಿಯೊಂದನ್ನು ಕಿರೀಟದೋಪಾದಿಯಲ್ಲಿ ಏರಿಸಿಕೊಂಡೆ. ಗೋಣಿಯಂಥ ನಾಲ್ಕು ಮೊಳದ ಖದ್ದರ್ ಬಟ್ಟೆಯ ತುಂಡೊಂದನ್ನು ಸೊಂಟಕ್ಕೆ ಬಿಗಿದುಕೊಂಡು ಹೆಮ್ಮೆಯಿಂದ ಊರಲ್ಲೆಲ್ಲ ಮೆರೆದೆ. ಇದು ಆ ಸಮಯದಲ್ಲಿ ನಮ್ಮ ಊರಿನ ಸಾಮಾನ್ಯ ಹೆಚ್ಚಿನ ಮಕ್ಕಳ ಮತ್ತು ಯುವಕರ ರೀತಿಯಾಗಿತ್ತು.

ನಾವು ಆ ಸಣ್ಣ ಪ್ರಾಯದಲ್ಲಿ ಗಾಂಧಿಯವರನ್ನು ಕಣ್ಣಾರೆ ಕಂಡವ

ರಲ್ಲ; ಕಿವಿಯಾರಿ ಕೇಳಿದವರಲ್ಲ. ಅವರು ಹೇಳುತ್ತಿದ್ದ ಸ್ವರಾಜ್ಯದ ಅರ್ಥ ತಿಳಿದವರು ಮೊದಲೇ ಅಲ್ಲ. ಆದರೂ ನಮ್ಮೆಲ್ಲರಲ್ಲಿ ಅಲ್ಲ ಆ ಸೇತು ಹಿಮಾಚಲ ಪರ್ಯಂತದ ಜನರೆಲ್ಲರಲ್ಲಿ ಈ ತೆರನಾದ ಉತ್ಸಾಹ ಏಕೆ ತುಂಬಿ ಬಂತು? ಅದರಿಂದಲೇ ಗಾಂಧಿಯವರು ನಮಗೆಲ್ಲ ಒಂದು ಅದ್ಭುತ ಶಕ್ತಿಯಾಗಿದ್ದರು ಎಂದು ಹೇಳಿದೆ.

ಆ ವರೆಗೆ ದೇಶಪ್ರೇಮ, ಸ್ವದೇಶಿ ಎಂದರೆ ಏನೆಂದು ತಿಳಿಯದ ಕಾಲ. ಅಂಥ ನಿರ್ಜೀವ ಕಾಲದಲ್ಲಿ ಬಾಳಿಬಂದ ನಾವು ಈ ಹೊಸ ಉತ್ಸಾಹದ ಭರದಲ್ಲಿ **"ಭಾರತ ಮಾತಾಕಿ ಜೈ" "ಮಹಾತ್ಮಾ ಗಾಂಧಿಕಿ ಜೈ"** ಎಂಬ ಘೋಷ ಕೇಳಿದ ಕ್ಷಣ ಹೊಸ ಹುರುಪಿನಿಂದ ತುಂಬಿ ಬರುತ್ತಿದ್ದೆವು. ನಮ್ಮ ಮೈರೋಮವೆಲ್ಲ ನಿಗುರಿ ನಿಲ್ಲುತಿತ್ತು. ಏನೇನೋ ಭಾವ ಹೊಳೆದು ಬಂದು ನಮ್ಮ ಗಂಟಲು ಬಿಗಿದು ಬರುತ್ತಿತ್ತು. ಅಂಗಡಿಗೆ ಸಾಮಾನು ಕೊಳ್ಳಲು ಹೋದರೆ ನಮ್ಮ ಮೊದಲನೇ ಪ್ರಶ್ನೆ "ಇದು ಸ್ವದೇಶಿಯೋ, ವಿದೇಶಿಯೋ?" ಎಂದು. ಸ್ವದೇಶಿ ಎಂದಾದರೆ ಹೆಚ್ಚು ಕ್ರಯವಾದರೂ ಕೊಟ್ಟು ಕೊಂಡುಕೊಳ್ಳುತ್ತಿದ್ದೆವು. ಏನು ಸ್ವಪ್ನ! ಏನು ಮಹದಾಶೆ ಆಗಿನದು.

ಆ ವರೆಗೆ ಪೋಲಿಸರನ್ನು ಕಣ್ಣೆತ್ತಿ ನೋಡುವ ಸಾಹಸ ಯಾರಿಗಿತ್ತು? ಊರಿನ ಪೋಲಿಸರು ಒಂದು ಭಯಂಕರ ಶಕ್ತಿಯಾಗಿದ್ದರು. ಸಣ್ಣ ಮಕ್ಕಳು ಅಳಲು ತೊಡಗಿದರೆ "ಪೋಲಿಸ್ ಬರುತ್ತಾನೆ, ಹಿಡಿದುಕೊಂಡು ಹೋಗುತ್ತಾನೆ" ಎಂದು ತಾಯಿಯಂದಿರು ಬೆದರಿಸುತ್ತಿದ್ದರು. ಕೆಂಪು ಟೊಪ್ಪಿ ನೋಡಿದ ಕ್ಷಣ ತಲೆಮರಸಿಕೊಳ್ಳುವ ಕಾಲವದು! ಅಂಥಾ **ಪರಾಕ್ರಮ ಕಂಠೀರವರು** ಆಗಿದ್ದೆವು ನಾವು. ಅದೇ ನಮಗೆ ಈ ಗಾಂಧಿ ಕಾಲದಲ್ಲಿ ಎಂಥ ಸಾಹಸ ಬಂದು ಹೋಯಿತು! ಬಿಳಿ ಟೊಪ್ಪಿಯನ್ನು ನೋಡಿದ ಕ್ಷಣ ಕಣ್ಣು ಕೆರಳಿಸುವ ಆ ಪೋಲಿಸರನ್ನು ಬಿಳಿ ಟೊಪ್ಪಿ ಧರಿಸಿಯೇ ಹಾಯಲು ನುಗ್ಗುತ್ತಿದ್ದೆವು! ಆ ಪೋಲೀಸ್ ಕೆಂಪು ಟೊಪ್ಪಿಗೆ ಕೈ ಹಾಕಿ ಉರುಳಿಸುವ ದಿಟ್ಟತನ ತೋರುತ್ತಿದ್ದೆವು!! ಅಯ್ಯೋ, ರಾಜಕೀಯದಿಂದ ಮಾರ್ಚ್

ಮಾಡುತ್ತಿದ್ದ ಪೋಲಿಸ್ ಜನಕ್ಕೆ ಪೊಳ್ಳುಗಳಾಗಿ ತಲೆಕೆಳಗೆ ಮಾಡಿ ನಡೆಯುವ ಕಾಲ ಬಂದಿತ್ತು ಆಗ!

ಹೀಗಿತ್ತು ಆ ಗಾಂಧಿ ಮಹಾತ್ಮರು ನಮ್ಮ ಮೇಲೆ ಧಾಳಿ ಮಾಡಿದ ರೀತಿ. ಈ ಮಹಾತ್ಮರ ಧಾಳಿಗೆ ಮಣಿಯದವರಾರು? ಸಾವಿರ ಸಾವಿರ ರೂಪಾಯಿ ಸಂಪಾದಿಸುವ ಡಾಕ್ಟರ್-ವಕೀಲರು ಮಣಿದರು. ಶಾಲಾ ಕಾಲೇಜುಗಳ ಅಧ್ಯಾಪಕ-ಪ್ರಾಧ್ಯಾಪಕರು ಮಣಿದರು. ಲಕ್ಷಾಧಿಪತಿಗಳು ಲಕ್ಷಲಕ್ಷ ಹಣ ತಂದು ಅವರ ಅಡಿದಾವರೆಗಳಿಗೆ ಸುರುವಿದರು. ವಿದ್ಯಾರ್ಥಿಗಳು ಶಾಲಾ-ಕಾಲೇಜು ಬಿಟ್ಟು ಜೇಲುಮನೆ ನುಗ್ಗಿದರು. ಇದೆಲ್ಲ ನನ್ನ ಬುದ್ಧಿಗೆ ಏನೇನೂ ತಿಳಿದು ಬಾರದ ರೀತಿ. ಆದರೂ ಇತರರ ಸಂಗಡ ಪೂರ್ಣವಾಗಿ ಹುಚ್ಚುಗೊಂಡವರಲ್ಲಿ ನಾನೂ ಒಬ್ಬ.

ನಮಗೆಲ್ಲ ಈ ಮಹಾತ್ಮರ ಮೇಲೆ ತಂದೆಯ ಮೇಲಿನಂಥ ಶ್ರದ್ಧೆ-ಭಕ್ತಿ, ಪ್ರೀತಿ-ಆದರ. ಅವರ ಪ್ರತಿ ಒಂದು ಮಾತು ಧರ್ಮದ ಒಂದೊಂದು ವಾಕ್ಯ; ತಂದೆಯ ಪ್ರೀತಿಯ ಉಪದೇಶ. ನೇರಾಗಿ ಹೃದಯವನ್ನು ಹೊಕ್ಕಿ ಕಲುಕುತ್ತಿತ್ತು. ಎಲ್ಲಾದರೂ ಊರ ಮಾರ್ಗವಾಗಿ ಅಥವಾ ಊರ ಪಟ್ಟಣಕ್ಕೆ ಬರುವವರಿದ್ದಾರೆ ಎಂದು ತಿಳಿದು ಬಂದರೆ ಜನರು ಸಾಲು ಸಾಲಾಗಿ ನಡೆದು ಹೋಗುವ ಆ ಉತ್ಸಾಹ ನೀವು ನೋಡಬೇಕಿತ್ತು. ನಾನೊಮ್ಮೆ ಇಪ್ಪತ್ತೆರಡು ಮೈಲು ದೂರದಿಂದ ಬಸ್ಸು ಸಿಕ್ಕದೆ ನಡೆದು ಬಂದಿದ್ದೆ. ಇನ್ನೇನು ಐದು ಮೈಲು ನಡೆದರೆ ಮಂಗಳೂರು ಸೇರಿ ಗಾಂಧಿಯವರ ಆ ದರ್ಶನ-ಪುಣ್ಯ ಗಳಿಸುತ್ತಿದ್ದೆ. ಅಷ್ಟರಲ್ಲಿ ನನಗೆದುರಾಗಿ ಬರುತ್ತಿದ್ದ ಜನರು "ಗಾಂಧಿಯವರು ಬೊಂಬಾಯಿಗೆ ಹಡಗು ಹತ್ತಿ ತೆರಳಿದರು" ಎಂದು ತಿಳುಹಿದರು. ಅಬ್ಬಬ್ಬ! ಅಂದಿನ ಆ ಆಶೆ-ನಿರಾಶೆಯ ನೆನಪು ಇಂದಿಗೂ ಅಚ್ಚಳಿಯದೆ ಹಾಗೇ ಉಳಿದು ಬಂದಿದೆ.

ಹೀಗೆ ನಮ್ಮ ಮುಂದಾಳುವಾಗಿ, ತಂದೆಯಾಗಿ ನಡೆಯಿಸಿಕೊಂಡು ಬಂದ ಈ ಮಹಾತ್ಮರನ್ನು 1948ನೇ ಜನವರಿ, 30ನೇ ಸಂಜೆ ಒಬ್ಬ ಹುಚ್ಚ, ಧೂರ್ತ ತಲೆಕೆಟ್ಟುಕೊಂಡು ಗುಂಡಿನಿಂದ ಹೊಡೆದು ಕೊಂದ ಎಂದು ಕೇಳಿ

ನಮ್ಮೆಲ್ಲರ ಸ್ಥಿತಿ ಏನಾಗಬೇಕು? ವಾರ್ತೆ ಕೊಡುತ್ತಿದ್ದ ರೇಡಿಯೋವಿನ ಗಂಟಲು ಬಿರಿದು ಬಂದು ಗೋಂಯ್ ಗೋಂಯ್ ಎಂದು ಅತ್ತುಕೊಂಡಿತು. ವಾರ್ತೆ ಕೇಳಿದ ಜನರು ಅಲ್ಲಲ್ಲೇ ಕುಸಿದು ಬಿದ್ದರು. ಸತ್ತ ಮನೆಯ ಛಾಯೆ ಊರಲ್ಲೆಲ್ಲಾ ಹಬ್ಬಿತು. ಜನರ ಶೋಕದ ಉಸಿರಿನಿಂದ ಭಾರವಾದ ಆ ಸಂಜೆಯ ಗಾಳಿ ಮೆಲ್ಲ ಮೆಲ್ಲನೆ ಹರಿಯಿತು. ಒಮ್ಮಿಂದೊಮ್ಮೆಗೆ ಊರಲ್ಲೆಲ್ಲ ಕತ್ತಲೆ ಇಳಿದು ಆವರಿಸಿಕೊಂಡಿತು.

ನಮ್ಮೆಲ್ಲರ ಜೀವನದಲ್ಲಿ ಈ ಗಾಂಧಿ-ಬಾಪೂ ಹೇಗೆ ಸೇರಿಹೋಗಿದ್ದರೆಂದು ಈಗ ನೀವು ಊಹಿಸಬಲ್ಲಿರಿ. ನಾವು ದೇಶಿಗರು, ಅವರ ಸಹವಾಸ ಲಾಭ ಪಡೆದವರು. ನಮ್ಮಲ್ಲಿ ಈ ರೀತಿಯ ಭಾವಾವೇಶ ಸಹಜ ಎಂದು ಹೇಳಿರಿ. ದೇಶಿಗರಲ್ಲದ ಪ್ರಖ್ಯಾತ ವಿದೇಶಿಗರ ಹೃದಯವು ಗಾಂಧಿಯವರ ಮರಣವಾರ್ತೆ ಕೇಳಿ ಹೇಗೆ ಅತ್ತುಕೊಂಡಿತುಎಂದು ಬಲ್ಲಿರಾ? ಅವರಲ್ಲಿ ಒಬ್ಬ ಜೋರ್ಜ್ ಬೆರ್ನಾಡ್ ಶಾ. ಮುದುಕ, ಲೋಕದ ಮಹಾ ಮಹಾ ಪುರುಷರನ್ನು ಮಾತಿನ ಚೂರಿಯಿಂದ ಚುಚ್ಚಿ ಚುಚ್ಚಿ ಇರಿಯುವವ ಅವನ ನಾಲಿಗೆಯ ಕಡಿತದಿಂದ ತಪ್ಪಿದ ಪುಣ್ಯಾತ್ಮರಾರೂ ಇಲ್ಲ. ಅಂಥ ಶಾ ಮುದುಕನ ಒರಟು ನಾಲಿಗೆಯೂ ಗಾಂಧಿಯವರ ಮರಣಾವಾರ್ತೆ ಕೇಳಿ ಮೆದುಗೊಂಡಿತು. ವ್ಯಂಗ್ಯದ ಧಾಟಿಬಿಟ್ಟು ನೇರಾಗಿ ನುಡಿಯಿತು "ಅಯ್ಯೋ, ಲೋಕದಲ್ಲಿ ಬಹಳ ಒಳ್ಳೆಯವನಾಗಿರುವುದೂ ಅಪಾಯಕರ, ಗಾಂಧಿ ಮನುಷ್ಯನಲ್ಲ. ಒಂದು ಅಪೂರ್ವ ಶಕ್ತಿ" ಎಂದು ಮುಳಮುಳನೆ ಅತ್ತುಕೊಂಡಿತು.

ಮಹಾನುಭಾವ ಶಾ ಹೇಳಿದಂತೆ ಗಾಂಧಿಯವರು ಒಂದು ಅಪೂರ್ವ ಶಕ್ತಿ; ಎಲ್ಲಿಂದಲೋ ಹೊಳೆದು ಬಂದು ಎಲ್ಲಿಯೋ ಅಡಗಿಕೊಂಡರು. ಆ ಮೊದಲೂ ಕತ್ತಲೆ, ಆ ನಂತರವೂ ಕತ್ತಲೆ. ನಡುವೆ ಒಂದಿಷ್ಟು ಬೆಳಕು.

ಈ ಬೆಳಕಿನ ಹೊನಲು ಹರಿಯಿಸಿದ ಗಾಂಧಿ-ರೀತಿ ಏನು ಎಂದು ನಿಮಗೆ ತಿಳಿಸಲು ನನಗೆ ಆತುರ. ಆದರೆ ಕಥೆ ತಿಳುಹುವಷ್ಟು ರೀತಿ ತಿಳುಹುವುದು ಸುಲಭವಲ್ಲ. ಅಲ್ಲದೆ ಈ ಮೂವತ್ತಾರು ಪುಟಗಳಲ್ಲಿ ಅದನ್ನು

ಹಿಡಿಸಬಲ್ಲೆ ಎಂದೂ ಹೇಳುವುದೂ ನನ್ನದು ದುಸ್ಸಾಹಸ. ಆದರೂ ಈ ಚಿಕ್ಕ ಸಂಚಿಕೆ ಆ ಕಡೆಗೆ ಬೊಟ್ಟು ಮಾಡಿ ತೋರಿಸುವ ಒಂದು **ಅಳಿಲಸೇವೆ.**

2.

ಗಾಂಧಿ ರೂಪ.

ಗಾಂಧಿ ಮಹಾತ್ಮರ ಸಮೀಪಕ್ಕೆ ಸುಳಿದವರ ಹೃದಯದಲ್ಲಿ ಭಕ್ತಿ ಭಾವ ತುಂಬಿ ಬರುತ್ತಿತ್ತು. ಬಾಗದ ಶಿರ ಬಾಗುತ್ತಿತ್ತು. ಚಿಂತೆಯಿಂದ ಭಾರವಾದ ಮನಸ್ಸು ಶಾಂತಗೊಂಡು ಹಗುರವಾಗುತ್ತಿತ್ತು. ಅಳುತ್ತಿರುವ ಮಗು ಅಳು ನಿಲ್ಲಿಸುತ್ತಿತ್ತು. ನಗುವಿನ ಕಿರಣವೊಂದು ಅಳುವಿನ ಮುಗಿಲನ್ನು ಹರಿದು ಚಿಮ್ಮಿ ನಲಿಯುತ್ತಿತ್ತು. ಹಾಗಿತ್ತು ಗಾಂಧಿ ಮಹಾತ್ಮರ ವರ್ಚಸ್ಸು; **ಗಂಭೀರ, ಶಾಂತ, ಪ್ರಸನ್ನ.**

ಸಾವಿರ ಸಾವಿರ ಜನ ನೆರೆದು ಬಂದಿರಲಿ, ಗೋಗೋ ಎಂದು ಗುಲ್ಲು ಮಾಡುತ್ತಿರಲಿ. ಮುಂದೆ ಬಂದು ನಿಂತ ಈ ಗಾಂಧಿ ಮಹಾತ್ಮರ ಸತ್ವ ಗಾಂಭೀರ್ಯದಿಂದ ತುಂಬಿದ ಮುಖವನ್ನು ನೋಡಿದ ಕ್ಷಣ ಮೌನರಾಗುತ್ತಿದ್ದರು. ಅಧಿಕಾರ ಪೂರ್ವಕವಾಗಿ ಎತ್ತಿದ ಆ ಅಭಯಹಸ್ತವನ್ನು ನೋಡಿ ತಲೆಬಾಗುತ್ತಿದ್ದರು. ಗಾಂಧಿ ಮಹಾತ್ಮ, ಗಾಂಧಿ ಅವತಾರ, ಗಾಂಧಿ ಪ್ರತ್ಯಕ್ಷ ಪರಮಾತ್ಮ ಎಂದು ಶ್ರದ್ಧಾ-ಭಕ್ತಿಯಿಂದ ತುಂಬಿ ಬರುತ್ತಿದ್ದರು. ಹಾಗಿತ್ತು ಗಾಂಧಿಯವರ ಮುಖ ಪ್ರಭಾವ.

ಒಮ್ಮೆ ದಕ್ಷಿಣದಿಂದ ಬಂದ ಯುವಕನೊಬ್ಬ, ತಾನು ಗಾಂಧಿಯವರಿಗಿಂತಲೂ ಮೀರಿದ ಕ್ರಾಂತಿಕಾರಿ ಎಂಬ ಅಹಂಕಾರದಿಂದ ತುಂಬಿದವ, ಗಾಂಧಿ ದಾರಿ ಹಳೇದಾರಿ, ತನ್ನ ದಾರಿ ಹೊಸ ದಾರಿ ಎನ್ನುವವ, ಒಮ್ಮೆ ಗಾಂಧಿಯವರನ್ನು ನೋಡಿ ಅವರ ರೀತಿ ಸರಿಯಲ್ಲ ಎಂದು ಸ್ಪಷ್ಟ ತಿಳಿಸಬೇಕೆಂದು ಗಾಂಧಿ ಆಶ್ರಮಕ್ಕೆ ಬಂದ. ಅತಿ ನಮ್ರರಾಗಿ ಗಾಂಧಿಯವರು

ಅವನನ್ನು ಬರಮಾಡಿಕೊಂಡರು. ಆದರೆ ಅವರ ಮುಂದೆ ಹೋದಕ್ಷಣ ಈ ಯುವಕನಿಗೆ ತನ್ನದೆಲ್ಲ ತಲೆಬುಡವಿಲ್ಲದ ವಿಚಾರವೆಂದು ತಿಳಿದು ಜಂತು. ಹೆಡೆಮುಡಿಸಿದ ನಾಗರ ಹಾವಿನಂತೆ ತಲೆಕೆಳಗೆ ಹಾಕಿದ. ನಮ್ರನಾಗಿ ಗಾಂಧಿಯವರ ಅನುಯಾಯಿಯಾಗಿ ಹಿಂತೆರಳಿದ. **ಹೀಗೆ ವಿನಯದಿಂದ ಅಹಂಕಾರವನ್ನು ಗೆಲ್ಲಲು ಬರುತ್ತದೆ ಎಂದು ತೋರಿಸುವ ಮುಖಮುದ್ರೆಯಾಗಿತ್ತು ಅವರದು.**

ಇನ್ನೊಮ್ಮೆ ಇದೇ ರೀತಿ ಒಬ್ಬ ಚೀನೀ ಯುವಕನು ಠಾಗೋರರ ಶಾಂತಿನಿಕೇತನದಲ್ಲಿದ್ದವನು, ಅಶಾಂತಹೃದಯನಾಗಿ ಗಾಂಧಿಯವರ ಸನ್ನಿಧಿಗೆ ಧಾವಿಸಿ ಬಂದನು. ತಾನೊಬ್ಬ ಗುಪ್ತಚಾರ ಎಂದು ಜನರೆಲ್ಲಾ ತನ್ನನ್ನು ಸಂದೇಹ ದೃಷ್ಟಿಯಿಂದ ನೋಡುತ್ತಾರೆಂಬ ಭ್ರಮೆ ಅವನಿಗೆ ಹಿಡಿದಿತ್ತಂತೆ. ಗಾಂಧಿಯವರ ಆ ಶಾಂತ ವರ್ಚಸ್ಸು ಅವನ ಅಶಾಂತ ಹೃದಯದಲ್ಲಿ ಆತ್ಮವಿಶ್ವಾಸವನ್ನು ತುಂಬಿತು. ಅಶಾಂತಿಯ ಮೂಲವಾದ ತನ್ನ ಪ್ರತಿ ಒಂದು ಪಾಪದ ಗಂಟನ್ನು ಗಾಂಧಿಯವರ ಮುಂದೆ ಬಿಚ್ಚಿದನು. ಅವರು ವಿಧಿಸಿದ ಪ್ರಾಯಶ್ಚಿತ್ತ ಕೈಕೊಂಡು ಶುದ್ಧಮನಸ್ಸುಳ್ಳವನಾಗಿ ತನ್ನ ದೇಶ ಚೀನಾಕ್ಕೆ ತೆರಳಿದನು. **ಶಾಂತಿಯಿಂದ ಅಶಾಂತಿಯನ್ನು ಗೆಲ್ಲಲು ಬರುತ್ತದೆ ಎಂದು ತೋರುವ ಮುಖವದು.**

ಇಂಥ ವರ್ಚಸ್ವಿ ಗಾಂಧಿಯವರು ಬಾಲಕರಾಗಿದ್ದಾಗ ಹೇಗಿದ್ದರು ಎಂದು ವಿಚಾರಿಸುವ. ತಾಯಿ ಪುತಲೀ ಬಾಯಿಯವರಿಗೆ ಸಹ ತಮ್ಮ ಈ ಈ ಕಿರಿ ಮಗ ಮೋಹನದಾಸನು ಸ್ವಲ್ಪ ಸುಂದರಾಕಾರನಾಗಿರಬೇಕು ಎಂದು ಅನ್ನಿಸುತ್ತಿತ್ತಂತೆ. ಗಣಪತಿ ಮೂಗು, ಆನೆ ಕಿವಿ, ಉದ್ದವಾದ ಸವುಳ ಸವುಳ ಕೈಕಾಲುಗಳು, ಮಿನುಗುತ್ತಿದ್ದ ಆ ಎರಡು ಕಣ್ಣುಗಳನ್ನು ಬಿಟ್ಟು ಹೇಳುವುದಾದರೆ ಬಾಲ್ಯದಲ್ಲಿ ಅವರ ವರ್ಚಸ್ಸು ಖರೇ ಸಪ್ಪೆ. ಅವರಿಗೆ ತಾವು ಚಂದವಲ್ಲವೆಂದು ಭಾವನೆ. ತಮ್ಮನ್ನು ನೋಡಿ ಮಕ್ಕಳೆಲ್ಲಾ ನಗುತ್ತಾರೆ ಎಂದು ಅಳುಕು. ತಲೆ ಎತ್ತಿ ಮುಖ ಮುಖ ನೋಡದಷ್ಟು ಸಂಕೋಚ. ಹೀಗಾಗಿ ಯಾರೊಂದಿಗೂ ಬೆರೆಯರು. ಏಕಾಕಿಯಾಗಿರುವರು. **ಹೇಗೆ**

ತಾನು ಸಹ ಇತರರಂತೆ ಸ್ಫುರದ್ರೂಪಿ, ಗಂಭೀರ, ಶಕ್ತಿವಂತನಾಗುವೆ ಎಂದು ಚಿಂತಿಸುತ್ತಿದ್ದರು.

ಬಾಲ್ಯದ ಅವರ ಸತ್ವಹೀನ ವರ್ಚಸ್ಸಿನೊಂದಿಗೆ ಮುಂದಿನ ಆ ಸತ್ವ ಪೂರ್ಣ ವರ್ಚಸ್ಸನ್ನು ಹೋಲಿಸಿ ನೋಡಿರಿ. ತಮ್ಮ ವರ್ಚಸ್ಸಿಗಾಗಿ ತಾವೇ ಅಳುಕುತ್ತಿದ್ದ ಅವರ ಬಾಲ್ಯದ ಸ್ಥಿತಿಯೊಂದಿಗೆ ಅವರ ಮುಂದಿನ ಆ ಅಳುಕಿಲ್ಲದ ನಿರ್ಭಯ ಸ್ಥಿತಿಯನ್ನು ಹೋಲಿಸಿ ನೋಡಿರಿ. ಎಷ್ಟು ದೊಡ್ಡ ವ್ಯತ್ಯಾಸ! ಆಕಾಶಕ್ಕೂ ಪಾತಾಳಕ್ಕೂ ಇರುವಷ್ಟು ಅಂತರವಲ್ಲವೇ?

ಇಲ್ಲಿದೆ ಮಹಾತ್ಮರ ರಹಸ್ಯ. **ಹುಟ್ಟುರೂಪ ಕುರೂಪ ಎಂದು ಕಂದಿಕೊಂಡು, ಕುಂದಿಕೊಂಡು ಏಕೆ ಇರುವಿರಿ? ಮುಖದ ತೇಜಸ್ವಿ ವರ್ಚಸ್ಸು ಕೇವಲ ಹುಟ್ಟುರೂಪವನ್ನು ಮಾತ್ರ ಹೊಂದಿಕೊಂಡಿಲ್ಲ. ಹೃದಯದ ಅಳುಕನ್ನು ಬಡಿದೋಡಿಸಿ "ನಾನು ಕೂಡ ಒಬ್ಬ ಮನುಷ್ಯ ನನ್ನದು ಸಹ ಒಂದು ಗಣ್ಯರೂಪ" ಎಂಬ ಆತ್ಮವಿಶ್ವಾಸದಿಂದ ನಿರ್ಭಯರಾಗಿ ಮುಂದೆ ಮುಖಮಾಡಿ ನಡೆಯಿರಿ. ತನ್ನಿಂದ ತಾನೇ ಮುಖದಲ್ಲಿ ಕಳೆ ಏರಿ ಬರುತ್ತದೆ.** ಇದು ಗಾಂಧಿರೂಪದ ರಹಸ್ಯ.

3.

ಗಾಂಧಿ ಉಡುಗೆ.

ಗಾಂಧಿಯವರ ಉಡುಗೆ ನೋಡಿರಿ. ನಾಲ್ಕು ಮೊಳದ ಖಾದೀ ತುಂಡು ಒಂದು ಮೊಣಗಂಟು ಮುಚ್ಚುವಷ್ಟು ಕಚ್ಚೆಗೆ, ಇನ್ನೊಂದು ಅಂತಹದೇ ಹೆಗಲಿಗೆ, ಹೊದ್ದುಕೊಳ್ಳಲಿಕ್ಕೆ.

ಹಿಮದಂತೆ ಶುಭ್ರವಾದ ಅವರ ಹೃದಯದಷ್ಟೇ ನಿರ್ಮಲವಾದ ಈ ಎರಡು ತುಂಡು ವಸ್ತ್ರಗಳಲ್ಲಿ ಮುಗಿದುಹೋಯಿತು ಅವರ ಉಡುಗೆಯ ಡೌಲು. ಇದಕ್ಕಿಂತಲೂ ಸಾದಾ ಉಡುಗೆಯು ಸಾಧ್ಯವೇ? ಗದ್ದೆಯಲ್ಲಿ

ಗ್ಗೈಯುವ ಬಡ ರೈತನ ಉಡುಗೆಯ ರೀತಿಯನ್ನು ಸಹ ನಾಚಿಸುವ ಸಾದಾ ಉಡುಗೆ ಲೋಕವಂದ್ಯರಾದ ಈ ಮಹಾತ್ಮರದು!

ಲಂಡನಿನಲ್ಲಿ ದುಂಡುಮೇಜಿನ ಪರಿಷತ್ತು. ಭಾರತದ ಕಾಂಗ್ರೆಸಿನ ಏಕಮಾತ್ರ ಪ್ರತಿನಿಧಿಗಳಾಗಿ ನಮ್ಮ ಗಾಂಧಿಯವರು ತೆರಳಿದ್ದಾರೆ. ಚಳಿದೇಶ ಮೈ ಬೆಚ್ಚಗಿರಿಸಿಕೊಳ್ಳಲಿಕ್ಕಾದರೂ ಶರ್ಟು, ಕೋಟು ಎಂದು ವಿಧವಿಧವಾದ ಕವಚಗಳನ್ನು ತೊಟ್ಟುಕೊಳ್ಳಬೇಕು. ಅಲ್ಲದೆ, ಡೌಲಿನ ಜನರಿಂದ ತುಂಬಿದ ನಗರ ಲಂಡನ್. ಒಳ್ಳೆ ಡೌಲಿನ ಉಡುಗೆ ಹಾಕಿಕೊಂಡು ಡೌಲಾಗಿ ಕಾಣದಿದ್ದರೆ ಯಾರು ಲೆಕ್ಕಿಸಿಯಾರು? ಆದರೆ ನಮ್ಮ ಗಾಂಧಿ ಮಹಾತ್ಮರು ಅವೇ ಎರಡು ವಸ್ತ್ರಗಳನ್ನು ತೊಟ್ಟುಕೊಂಡು ಲೋರ್ಡ್ ಸೇಂಕಿ ದೊರೆಗಳ ಬಲಬದಿಯಲ್ಲಿ ಗಂಭೀರರಾಗಿ ವಿರಾಜಿಸಿದರು. ಅದೇ ಉಡುಗೆಯಲ್ಲಿ ಅಲಂಕೃತರಾಗಿ ಬಕ್ಕಿಂಗಾಮ್ ಮಹಲಿನಲ್ಲಿ ಜೋರ್ಜ್ ಚಕ್ರವರ್ತಿಗಳನ್ನು ಕಂಡು ಕೈಗೆ ಕೈಕೊಟ್ಟು ಕುಲುಕಿದರು. ಅದೇ ಅರೆಬತ್ತಲೆ ಉಡುಗೆಯಲ್ಲಿ ಆ ಊರಿನ ಮಕ್ಕಳ-ಹೆಮ್ಮಕ್ಕಳ ನಡುವೆ ಓಡಾಡಿದರು. ಅಲ್ಲಿಯ ಮಕ್ಕಳಿಗೆಲ್ಲ "ಗಾಂಧಿ ಮಾವ, ಗಾಂಧಿ ಅಜ್ಜ" ಎಂದು ಪ್ರೀತಿಯ ಬಂಧುವಾಗಿ ಮೆರೆದರು

ಆಯಾಯ ದೇಶದ ರೀತಿನೀತಿಗೆ ಅನುಸರಿಸಿ ಉಡುಗೆ ತೊಡುಗೆ ಇರಲಿ. ಅದು ಸಾದಾ ಇರಲಿ. ದೇಶದಲ್ಲಾಗಲಿ, ವಿದೇಶದಲ್ಲಾಗಲಿ ದೇಶೀಯ ಉಡುಗೆ ಬಿಟ್ಟು ವಿದೇಶೀಯ ಉಡುಗೆ ಹಾಕಿಕೊಳ್ಳುವುದು **ನಮ್ಮ ಗುಲಾಮತನದ ಲಕ್ಷಣವಲ್ಲದೆ ಮತ್ತೇನು** ಎಂದು ಗಾಂಧಿಯವರ ವಾದ.

ಬಾಲ್ಯದಲ್ಲಿ ಗಾಂಧಿಯವರು ಸಹ ನಮ್ಮಂತೆ ಡೌಲಿನ ಉಡುಗೆಯನ್ನು ಮೆಚ್ಚುತ್ತಿದ್ದರು. ನಿಲುಗನ್ನಡಿಯ ಮುಂದೆ ನಿಂತು ತಮ್ಮ ಬೆಡಗಿನ ಉಡುಗೆಯನ್ನು ವಿಧವಿಧವಾಗಿ ನೋಡಿಕೊಂಡು ಹಿಗ್ಗುತ್ತಿದ್ದರು. ಒಂದಿಷ್ಟು ಅಸಾವಧಾನವಾಗಿ ಹೋದರೆ ತಮ್ಮ ಸರ್ವನಾಶವಾಯಿತೆಂಬಷ್ಟು ಮನಸ್ಸಿನಲ್ಲೇ ಕೊರಗಿ ಕುಂದುತ್ತಿದ್ದರು. ಬ್ಯಾರಿಷ್ಟರೀ ಕಲಿಯಲು ಹೋಗುವ ಪ್ರಸಂಗ. ಹಡಗಿನಲ್ಲಿ ಬಿಳಿ ಉಡುಗೆ ಹಾಕಿಕೊಳ್ಳುವುದು ಎಲ್ಲರ ಸಂಪ್ರದಾಯ. ತಿಳಿಯದೆ ಕಪ್ಪು ಉಡುಗೆ ಧರಿಸಿದರು. ಸೌಥೇಂಪ್ಟನ್ ಬಂದರಿ

ನಲ್ಲಿ ಇಳಿಯುವಾಗ ಕಪ್ಪು ಉಡುಗೆ ಧರಿಸುವ ಸಂಪ್ರದಾಯ. ತಿಳಿಯದೆ ಬಿಳಿ ಉಡುಗೆ ಚಂದವೆಂದು ತೊಟ್ಟುಕೊಂಡರು. ತಮ್ಮ ಈ ಅಜ್ಞಾನವು ಗೋಚರಕ್ಕೆ ಬಂದ ಕ್ಷಣ ನಾಚುಗೆಯಿಂದ ತಲೆ ಎತ್ತಿ ನಿಲ್ಲುವುದೂ ಅವರಿಗೆ ಕಷ್ಟವಾಯಿತು.

ಉಡುಗೆ ತೊಡುಗೆಯೇ ತಮ್ಮ ಸರ್ವಸ್ವ ಎಂದು ತಿಳಿದ ಬ್ಯಾರಿಸ್ಟರ್ ಗಾಂಧಿಯವರೇ ಮುಂದೆ ಭಾರತೀಯ ಜನರ ಮುಂದಾಳುಗಾಂಧಿಯವರಾದಾಗ ದೇಶೀಯ ಉಡುಗೆ ಕ್ರಮವನ್ನು ಉಪದೇಶಿಸಿದರು. ತಾವೂ ಅದೇ ರೀತಿ ಆಚರಿಸಿದರು. ಗಾಂಧಿಯವರ ಉಪದೇಶವು ನಮ್ಮ ಜನರ ಉಡುಗೆ ಕ್ರಮದಲ್ಲಿ ಕ್ರಾಂತಿಯನ್ನೇ ತಂದಿತು. ಆಡಂಬರವು ಅಡಗಿತು. ಧನಿಕರು ಬಡವರು ಎಂಬ ಭೇದವಿರದೆ ಒಂದೇ ತೆರನಾದ ಸಾದಾ ಉಡುಗೆ ಬಳಕೆಗೆ ಬಂದಿತು. **ದೇಶಪ್ರೇಮದ ಮುದ್ರೆ ಉಡುಗೆಯ ರೀತಿಯ ಮೇಲೂ ಬಿದ್ದಿತು.**

4.

ಭಯ—ನಿರ್ಭಯ.

ಸೂರ್ಯಾಸ್ತವನ್ನು ಕಾಣದ, ಭೂಮಂಡಲದ ಪ್ರತಿ ಒಂದು ಖಂಡದಲ್ಲೂ ವ್ಯಾಪಿಸಿದ ಬ್ರಿಟಿಷ್ ಸಾಮ್ರಾಜ್ಯವದು. ಅಂಥ ಸಾಮ್ರಾಜ್ಯಶಕ್ತಿಯ ಇದಿರು ನಿಂತು **“ಚಲೇ ಜಾವ್” “ಹಿಂದುಸ್ಥಾನ ಬಿಟ್ಟು ನಡೆಯಿರಿ”** ಎಂದು ಗರ್ಜಿಸಿದವರು ನಮ್ಮ ಮಹಾತ್ಮ ಗಾಂಧಿಯವರು. ಎಂಥ ಧೈರ್ಯ, ಸಾಹಸವೆಂದು ನೀವೇ ಊಹಿಸಿರಿ.

ಮುಂದೆ 1946–47ರಲ್ಲಿ ಹಿಂದು-ಮುಸಲ್ಮಾನರು ಮತದ್ವೇಷದ ಉರಿಯಿಂದ ಹೊಗೆಯುತ್ತಿದ್ದಾಗ, ಮನುಷ್ಯರಾಗಿದ್ದವರು ರಕ್ಕಸರಾದಾಗ, ರಕ್ತ ಪಿಶಾಚಿಗಳಾದಾಗ, ನಿರ್ಭೀತರಾಗಿ, ನಿರ್ಲಕ್ಷ್ಯರಾಗಿ ಮಧ್ಯೆ ನಿಂತು ಶಾಂತ

ಗೈದ ಈ ಗಾಂಧಿ ಮಹಾತ್ಮರ ಕೆಚ್ಚೆದೆಯನ್ನು **ಕಠೋರವೆನ್ನುವಿರಾ? ಮೃದುವೆನ್ನುವಿರಾ?**

ಇಂಥ ಧೀರಾದಿಧೀರ, ಕರುಣಾಳು ಗಾಂಧಿಯವರು ಬಾಲ್ಯದಲ್ಲಿ ಹೇಗಿದ್ದಿರಬಹುದೆಂದು ಊಹಿಸುವಿರಿ?

ಕತ್ತಲಾಯಿತೆಂದ ಕ್ಷಣ ಅವರ ಮನಸ್ಸು ಭೀತಿಯ ದೆವ್ವದ ಬೀಡಾ ಗುತ್ತಿತ್ತು. ಈ ಭೀತಿಯ ವಿವಿಧ ರೂಪಗಳು ವಿಕರಾಳ ಭೂತಗಳಾಗಿ, ಕಾಳಸರ್ಪಗಳಾಗಿ ಕ್ರೂರ ಕಳ್ಳ–ಕಾಕರರಾಗಿ ಕಣ್ಣಮುಂದೆ ಕೋಲಾಹಲ ಮಾಡುತ್ತಿದ್ದುವು. ಕಾಲು ನಿಂತಲ್ಲೆ ಅಂಟಿಹೋಗುತ್ತಿತ್ತು. ಒಂದು ಕೋಣೆಯಿಂದ ಇನ್ನೊಂದು ಕೋಣೆಗೆ ಒಂಟಿಯಾಗಿ ಹೋಗರು. ತಾಯಿ ಯಾ ದಾದಿಯ ಬೆನ್ನು ಅಂಟಿಕೊಂಡೇ ಅಂಗಳಕ್ಕೆ ಇಳಿಯುತ್ತಿದ್ದರು. ಒಂದಿಷ್ಟು ಸದ್ದಾದರೆ ಅಲ್ಲೇ ಪೆಚ್ಚುಗಟ್ಟಿ ಹೋಗುತ್ತಿದ್ದರು. ಪತ್ನಿಯಾಗಿ ಬಂದ ಕಸ್ತೂರಿಬಾಯಿಸಹ ತಮಗಿಂತ ಧೈರ್ಯವಂತೆಯಾಗಿದ್ದಳೆಂದು ಮುಂದೆ ಗಾಂಧಿಯವರೇ ಬರೆದಿದ್ದಾರೆ.

ಅವರ ಈ ಎರಡು ಪ್ರಾಯಗಳಲ್ಲಿನ ಸಾಮ್ಯ ಹೇಗಿದೆ? ಪ್ರೌಢ ಜೀವನದ ಆ ನಿರ್ಭೀತ, ನಿರ್ಭಯ ರೀತಿ ಎಲ್ಲಿ? ಬಾಲ್ಯದ ಈ ಅಂಜುಬುರು ಕತನವಲ್ಲಿ?

ನಿಮ್ಮ ಧೈರ್ಯವನ್ನು ಬಾಲಕ ಮೋಹನದಾಸ ಗಾಂಧಿಯ ಧೈರ್ಯ ದೊಂದಿಗೆ ಹೋಲಿಸಿ ನೋಡಿರಿ. ಪ್ರಯತ್ನಪಟ್ಟರೂ ನಿಮಗೆ ಅವರಿಗಿಂತ ಅಂಜುಬುರುಕರಾಗಲು ಸಾಧ್ಯವಿದೆಯೇ? ಹಾಗಿದ್ದರೆ ಮುಂದೆ ಪ್ರೌಢ ಜೀವನದಲ್ಲಿ ತೋರಲು ಸಾಧ್ಯವಾದ ಆ ಅಪ್ರತಿಮ ಸಾಹಸದ ರಹಸ್ಯವೇನು?

ಈ ರಹಸ್ಯವೇ ಗಾಂಧಿಯವರ ಗಾಂಧಿತ್ವವನ್ನು ಸಾಧಿಸಿದ ರೀತಿ. **ತನ್ನ ನೈರ್ಬಲ್ಯವೆಲ್ಲಿದೆ ಎಂದು ತಿಳಿದುಕೊಳ್ಳಬೇಕು, ಹಾಗೆ ತಿಳಿದು ಚಿರಸಾಧನೆಯ ಬಲದಿಂದ ಆ ನೈರ್ಬಲ್ಯದೊಂದಿಗೆ ಹೋರಾಡಿ ಅದನ್ನು ಹೃದಯದಿಂದ ಹೊರಗೆ ಹೊಡೆದೋಡಿಸಬೇಕು.**

ಕತ್ತಲೆಯಲ್ಲಿ ಹೊರಗೆ ಹೊರಡಲು ಅಂಜಿಕೆಯಾಗುವುದೆಂದು ಅವರು ಮನೆಯ ಮೂಲೆ ಸೇರಿ ಮುದುಡಿಕುಳ್ಳಿರುತ್ತಿದ್ದಿಲ್ಲ. ಆಗ್ರಹಪಟ್ಟು, ಸಾಹಸಮಾಡಿ ಅಂಗಳಕ್ಕೆ ಇಳಿಯುತ್ತಿದ್ದರು. ಕಣ್ಣೆತ್ತಿ ಕತ್ತಲೆಯ ಮುಖ ನೋಡಲು ಪ್ರಯತ್ನಿಸುತ್ತಿದ್ದರು. ಕಾಲಡಿ ತಪ್ಪಿಸಿ "ಓಡು ಒಳಗೆ" ಎಂದು ಭಯದ ಭೂತ ಎದೆಯೊಳಗೆ ಗುಡುಗುಡಿಸುತ್ತಿತ್ತು. ಆದರೂ ಅಲ್ಲೇ ಕಾಲೂರಿ, ಗಟ್ಟಿ ನಿಂತು ತಲೆ ಎತ್ತುವ ಸಾಹಸ ಮಾಡುತ್ತಿದ್ದರು. ಅಷ್ಟರಲ್ಲಿ ಎದೆಯೊಳಗಿನ ಭೂತವು ಹೊರ ಹಾರಿ ಬಂದು ಅಮುಕಿ ಹಿಡಿದಂತಾಗುತ್ತಿತ್ತು. ಅಸಫಲರಾಗಿ ಕಾಲುಕಿತ್ತು ಒಳಗೆ ಓಡುತ್ತಿದ್ದರು.

ಹೀಗೆ ಈ ಛಲ ಸಾಧನೆಯು ನಿರಂತರವಾಗಿ ಸಾಗುತ್ತಿತ್ತು. ಬಾಲಕ ಗಾಂಧಿಯ ಮನದ ಈ ಹಂಬಲವನ್ನು ಮತ್ತು ಅವನ ಅಸಹಾಯ ಸ್ಥಿತಿಯನ್ನು ತಿಳಿದುಕೊಂಡ ಪ್ರೀತಿಯ ದಾದಿ ರಮಾಬಾಯಿಯು ಕನಿಕರಗೊಂಡಳು. ಕರೆದು "ಮಗೂ, ರಾಮನಾಮ ಜಪಿಸು, ದೆವ್ವ, ಭೂತಗಳೆಲ್ಲ ಹೆದರಿ ಓಡುತ್ತವೆ" ಎಂದು ಉಪದೇಶಿಸಿದಳು. ಅಂದಿನಿಂದ ರಾಮನಾಮವು ಗಾಂಧಿಯವರ ತಾರಕಮಂತ್ರವಾಯಿತು. ದಿನಹೋದಂತೆ ಎದೆಯೊಳಗಿನ ಭಯ-ಭೀತಿಯ ಮುಸುಕು ಸರಿಯುತ್ತಾ, ಅಳಿಯುತ್ತಾ ಬಂತು. ಧೈರ್ಯದ ಪ್ರಕಾಶ ಕಿರಣಗಳು ಹೊಳೆದು ಬಂದುವು.

ಹೇಗಿದ್ದವರು ಹೇಗಾದರು? ಭಯದ ವಜ್ರಮುಷ್ಟಿಯಲ್ಲಿ ತತ್ತರಿಸುತ್ತಿದ್ದವರು ನಿರ್ಭಯದ ಗಗನದಲ್ಲಿ ವಿಹರಿಸ ಹತ್ತಿದರು. ಕತ್ತಲೆಯ ಪಾತಾಳದಲ್ಲಿದ್ದವರು ಬೆಳಕಿನ ಆಕಾಶವನ್ನೇರಿದರು. **ಅಂಜಿಕೆಯ ಕತ್ತಲೆಯಿಂದ ಧೈರ್ಯದ ಬೆಳಕಿನ ಕಡೆಗೆ.** ಇದು ಗಾಂಧಿ ರೀತಿ.

"ತಮಸೋಮಾಜ್ಯೋತಿರ್ಗಮಯ" ಇದು ಗಾಂಧಿ ಮಂತ್ರ.

5.

ಸತ್ಯ-ರೀತಿ.

ಗಾಂಧಿಯವರ ಕಥೆ ನೀವು ಓದಿರಬಹುದು. ಅವರ ಧ್ಯೇಯ–

ಸಾಧನೆಗಳನ್ನು ತಿಳಿದಿರಬಹುದು. ಅವರ ಜೀವನದ ಮುಖ್ಯ ಲಕ್ಷ್ಯವೇನು ಎಂದು ಹೇಳುವಿರಾ?

ಹಿಂದುಸ್ಥಾನದ ಸ್ವಾತಂತ್ರ್ಯ, ಹಿಂದೂ-ಮುಸಲ್ಮಾನರ ಐಕ್ಯ, ಹರಿಜನರುದ್ಧಾರ ಎಂದು ಮೊದಲಾಗಿ ಹೇಳುವಿರಿ. ಆದರೆ ಇವೆಲ್ಲ ಅವರ ಉಪಲಕ್ಷ್ಯಗಳು ಮಾತ್ರ. ಅವರ ಮುಖ್ಯ ಲಕ್ಷ್ಯ **ಸತ್ಯ, ಸತ್ಯದ ಸಾಧನೆ.** ಅವರ ಆತ್ಮಕಥೆಯನ್ನು ಅವರು ಯಾವ ಹೆಸರಿನಿಂದ ಕರೆದಿದ್ದಾರೆಂದು ಗೊತ್ತೇ? **"ಸತ್ಯಶೋಧನೆ"** ಎಂದು ತಮ್ಮ ಜೀವನವೆಲ್ಲ ತಮ್ಮ ಕೃತಿಯಲ್ಲಿ, ಮಾತಿನಲ್ಲಿ ಮತ್ತು ಮನದಲ್ಲಿ ಸತ್ಯದ ಸಾಧನೆಯಾಗುತ್ತಿರುವುದೋ ಎಂದು ಶೋಧಿಸುತ್ತಿದ್ದರು. ಹೃದಯವನ್ನು ಬಿಡಿಸಿ ಬಿಡಿಸಿ, ಅಲ್ಲಲ್ಲಿ ಹುದುಗಿಕೊಂಡ ಅಸತ್ಯದ ಬೇರುಗಳನ್ನು ಕಿತ್ತು ಬಿಸುಡುತ್ತಿದ್ದರು. ನೀವೆಲ್ಲಾದರೂ ತಮ್ಮ ಶರೀರದ ಮೇಲೆ ತಾವೇ ಶಸ್ತ್ರಪ್ರಯೋಗಮಾಡಿ ವಿಕಾರಗೊಂಡ ಭಾಗವನ್ನು ಕೊಯಿದು ಬಿಸುಡುವ ಸರ್ಜನರನ್ನು ನೋಡಿರುವಿರಾ? ಗಾಂಧಿಯವರು ಅಂಥಾ ಒಬ್ಬ ಸರ್ಜನರು. ತಮ್ಮ ಹೃದಯವನ್ನು ತಾವೇ ಸೀಳಿ ನೋಡುವವರು. "ನನ್ನಲ್ಲಿ ಅಂಜಿಕೆಯ ವಿಕಾರ ಇದೆ, ದುರಾಶೆ ಇದೆ, ಪಾಪದ ಭಾವಹುದುಗಿಕೊಂಡಿದೆ ಎಂದು ಮೊದಲಾಗಿ ತಮ್ಮ ಕೀಳು ಭಾವಗಳನ್ನು ಶೋಧಿಸಿ ಜನರೆಲ್ಲರ ಮುಂದೆ ಬಯಲು ಮಾಡುತ್ತಿದ್ದರು. ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಕೈಗೊಳ್ಳುತ್ತಿದ್ದರು. **ಸತ್ಯವು ಗಾಂಧಿಯುವರ ಜೀವನದ ಉಸಿರು.**

ಹುಟ್ಟಿನಿಂದಲೇ ಅವರಿಗೆ ಸತ್ಯದ ಮೇಲೆ ಈ ಒಲವು ಮೊಳೆದು ಬಂದಿತ್ತು. ಬಾಲ್ಯದಲ್ಲಿ ಅವರು ಸಣ್ಣ ಸಣ್ಣ ಸಂಗತಿಗೂ ಅಂಜುವ ಸ್ವಭಾವದವರಾಗಿದ್ದರೆಂದು ಈ ಮೊದಲು ಓದಿದಿರಿ. ಆದರೆ ಸತ್ಯಪಾಲನೆಯ ಪ್ರಶ್ನೆ ಮುಂದೆ ಬರಲಿ, ಎಲ್ಲಿಲ್ಲದ ಧೈರ್ಯವು ಮೂಡಿ ಬರುತಿತ್ತು. ಪುಷ್ಟನಾಗಿ ಬೆಳೆದು, ಸುಂದರನಾಗಿ ತೋರಬೇಕೆಂದು ಅವರು ಒಮ್ಮೆ ಮಾಂಸಾಹಾರ ಮಾಡಲು ತೊಡಗಿದರು, ಮಾಂಸಕೊಳ್ಳಲು ಹಣವಿಲ್ಲದಾಗ ಹಣ ಕದಿಯ ತೊಡಗಿದರು ಎಂದು ನೀವು ಅವರ ಜೀವನ ಕಥೆಯಲ್ಲಿ ಓದಿರುವಿರಾ? ಆದರೆ ತಂದೆತಾಯಿಗಳ ಮುಂದೆ ಸುಳ್ಳು ಹೇಳುವ ಪ್ರಸಂಗ ಬರುವುದಲ್ಲ,

ಏನು ಮಾಡಲಿ, ಎಂದು ಹಿಂದು ಮುಂದು ನೋಡಲು ತೊಡಗಿದರು. ಕೊನೆಗೆ ಅಹಸ್ಯಗೊಂಡು ಈ ಗೊಂದಲವೇ ಬೇಡವೆಂದು ಮಾಂಸಾಹಾರ ಬಿಟ್ಟುಬಿಟ್ಟರು. ಆದರೂ ಅಸತ್ಯದ ಪ್ರಕರಣ ತಮ್ಮಿಂದ ನಡೆದು ಹೋಯಿತಲ್ಲ, ಇದಕ್ಕೇನು ಪ್ರಾಯಶ್ಚಿತ್ತ ಎಂದು ಯೋಚಿಸಿದರು. ತಂದೆಗೆ ಎಲ್ಲವನ್ನೂ ತಿಳುಹಿ ವ್ಯಥೆಯಿಂದ ಭಾರವಾದ ಎದೆಯನ್ನು ಹಗುರಮಾಡಿಕೊಳ್ಳಲೇ? ಅಬ್ಬಬ್ಬ! ಈ ಅನಾಚಾರ-ಕಥೆ ಕೇಳಿ ಆ ಧರ್ಮಪ್ರಾಣ, ವೃದ್ಧ ತಂದೆಗೆ ಎದೆ ಒಡೆದುಬರಲಿಕ್ಕಿಲ್ಲವೇ? ಆದರೂ ಧೈರ್ಯಮಾಡಿ ಒಂದು ಕಾಗದದಲ್ಲಿ ತಾವು ಮಾಡಿದ ಅಪರಾಧಗಳನ್ನೆಲ್ಲ ಸ್ಪಷ್ಟ-ಸ್ಪಷ್ಟವಾಗಿ ಬರೆದು ತಂದೆಯವರ ಕೈಗೆ ಒಪ್ಪಿಸಿ ತನ್ನನ್ನು ಶಿಕ್ಷಿಸಬೇಕೆಂದು ಕೇಳಿಕೊಂಡರು.

ಇದು ಗಾಂಧಿಯವರ ಸತ್ಯ-ಸಾಧನೆಯ ರೀತಿ. **ಸುಳ್ಳಾಡಬಾರದು. ತಪ್ಪಿ ಸುಳ್ಳಾಡಿದರೆ ತನ್ನ ಸುಳ್ಳನ್ನು ಬಹಿರಂಗವಾಗಿ ಒಪ್ಪಿಕೊಳ್ಳಬೇಕು. ತಕ್ಕ ಪ್ರಾಯಶ್ಚಿತ್ತ ಕೈಕೊಳ್ಳಬೇಕು.**

ಗಾಂಧಿಯವರಿಗೆ ಸತ್ಯವು ಹೃದಯವನ್ನು ಬಲಗೊಳಿಸುವ ಜೀವಾಮೃತವಾಗಿತ್ತು. ಸತ್ಯದ ಬೆಂಬಲ ಇದೆ ಎಂದು ಅವರ ಮನಸ್ಸಿಗೆ ಖಚಿತವಾದರೆ ಇಡೀ ಸಮಾಜವನ್ನೇ ಇದಿರಿಸಿ ನಿಲ್ಲುವ ಧೈರ್ಯ ಬರುತ್ತಿತ್ತು. ಬ್ಯಾರಿಷ್ಟರೀ ಕಲಿಯಲಿಕ್ಕೆಂದು ಇಂಗ್ಲೆಂಡಿಗೆ ಹೊರಟಿದ್ದರು. ಸಮಾಜದ ಸನಾತನಿ ಬಂಧುಗಳಿಗೆ ಇದು ಸಹಿಸಲಾರದ ಅಧರ್ಮ ಮಾರ್ಗ; ಸನಾತನ ಸತ್ಯದ ಸರ್ವನಾಶ. ಹದಿನೆಂಟು ವರ್ಷ ಪ್ರಾಯದ, ಕೋಮಲ ಹೃದಯದ ಗಾಂಧಿಯವರನ್ನು ಕರೆದು ಧರ್ಮಗುರು ಶೇಟ್‌ಜೀಯವರು "ವಿಲಾಯತಿಗೆ ಹೋದರೆ ಜಾತಿಯಿಂದ ಬಹಿಷ್ಕರಿಸುವೆ" ಎಂದು ಗರ್ಜಿಸಿದರು. ಗಾಂಧಿಯವರ ಹೃದಯದಲ್ಲಿ ಎಂದೂ ಕಾಣದ ಕಾಠಿಣ್ಯವು ಸಿಡಿದು ಬಂತು. ಜಾತಿಯ ಕುರುಡು ನಂಬಿಕೆಯನ್ನು ತುಳಿದು ನಡೆಯುವ ಕ್ರಾಂತಿಕಾರಿಯ ದಿಟ್ಟತನದ ಲಕ್ಷಣ ಮೊದಲನೇ ಬಾರಿ ಅವರಲ್ಲಿ ತೋರಿ ಬಂತು. **"ಕುರುಡು ನಂಬಿಕೆ ಇದ್ದಲ್ಲಿ ವಿಚಾರದ ಕಣ್ಣು ಕಟ್ಟಿ ಬರುತ್ತದೆ. ವಿಚಾರದ ಕಣ್ಣು ಕಟ್ಟಿದಲ್ಲಿ ಅಸತ್ಯದ ಬಲ್ಲೆ ಬೆಳೆದು ಬರುತ್ತದೆ"** ಎಂಬ ಸತ್ಯ ಮಾರ್ಗವು

ಅವರಿಗೆ ಹೊಳೆದು ಬಂದಿತು. **"ಸತ್ಯದ ಸಾಧನೆಯಲ್ಲಿ ಇಂಥ ಅನೇಕ ಗರ್ಜನೆಗಳನ್ನು ಇದಿರಿಸಿ ಮುಂದೆ ನಡೆಯುವ ಎದೆಗಾರಿಕೆ ಬೇಕು"** ಎಂದು ಅನ್ನಿಸಿತು. ಮೌನವಾಗಿ ನಿಂತು ಬಿಟ್ಟರು. ಈ ದಿಟ್ಟತನದ ಮೌನ ನೋಡಿ ಧರ್ಮಗುರು ಶೇಟಜೀಯ ಕೋಪ ಕೆರಳಿತು. ಅಧಿಕಾರವಾಣಿಯಿಂದ "ಮೋಹನದಾಸ ಕರಮಚಂದ ಗಾಂಧಿಗೆ ಮೋದ್ ಬನಿಯಾ ಜಾತಿಯಿಂದ ಬಹಿಷ್ಕಾರ, ಬಹಿಷ್ಕಾರ, ಬಹಿಷ್ಕಾರ" ಎಂದು ಘಂಟಾಘೋಷವಾಗಿ ಸಾರಿದರು. ಗಾಂಧಿಯವರ ಎದೆ ಒಮ್ಮೆ ಜುಮ್ಮೆಂದಿತು. ಆದರೆ ಅವರ ಅಂತರಾತ್ಮವು **"ನಿನ್ನದು ಸತ್ಯದ ದಾರಿ, ಬೆದರದಿರು"** ಎಂದು ಅಭಯ ಹೇಳುತ್ತಿತ್ತು. **ಸತ್ಯದ ಸಾಧನೆ ಜಾತಿಯ ಕುರುಡು ಕಟ್ಟಿಗಿಂತ ಮೇಲು** ಎಂದು ಧೈರ್ಯಗೊಂಡು ಅವರು ವಿಲಾಯತಿಗೆ ನಡೆದೇ ಬಿಟ್ಟರು.

ಗಾಂಧಿರೀತಿಗನುಸಾರವಾಗಿ ಸುಳ್ಳುಹೇಳದಿರುವುದು ಮಾತ್ರ ಸತ್ಯದ ಸಾಧನೆಯಲ್ಲ. ಹೇಳಿದ ಸುಳ್ಳನ್ನು ಒಪ್ಪಿ ಕೊಳ್ಳುವುದೂ ಸತ್ಯದ ಸಾಧನೆ. ಸತ್ಯದ ಪ್ರಕಾಶವನ್ನು ಮಂದಗಟ್ಟಿಸುವ ಕುರುಡು ನಂಬಿಕೆಗಳನ್ನು ತೊಡೆದು ಹಾಕುವುದೂ ಸತ್ಯದ ಸಾಧನೆ. ಹಾಗೆಯೇ **ಅನ್ಯಾಯವನ್ನು ಇದಿರಿಸುವುದೂ ಸತ್ಯದ ಸಾಧನೆ.**

ದಕ್ಷಿಣ ಆಫ್ರಿಕಕ್ಕೆ ತೆರಳಿ ದಿನ ಏಳೆಂಟು ಕಳೆದಿವೆಯಷ್ಟೆ. ಇನ್ನೂ ಅಲ್ಲಿನ ಪರಿಚಯ ಪೂರ್ಣವಾಗಿದ್ದಿಲ್ಲ. ದರ್ಬಾನಿನಿಂದ ಪ್ರಿಟೋರಿಯಾಕ್ಕೆ ಹೋಗಬೇಕಿತ್ತು. ಮೊದಲನೇ ದರ್ಜೆಯ ಟಿಕೇಟುಕೊಂಡು ಮೊದಲನೇ ದರ್ಜೆಯ ಬಂಡಿಯಲ್ಲಿ ಪ್ರಯಾಣ ಮಾಡುತ್ತಿದ್ದರು. ಬಿಳಿಮೋರೆಯವನೊಬ್ಬನು ಬಂದು "ನಡೆ ಇಲ್ಲಿಂದ" ಎಂದನು. "ನನ್ನಲ್ಲಿ ಮೊದಲನೇ ತರಗತಿಯ ಟಿಕೇಟು ಇದೆ" ಎಂದು ಅವರು ನಮ್ರವಾಗಿ ನುಡಿದರು. "ಇದ್ದಿರಲಿ, ಹೊರಡು ಇಲ್ಲಿಂದ ಕೂಲಿಮೇನ್; ಇಲ್ಲದೆ ಹೋದರೆ ಪೋಲಿಸರಿಂದ ಹೊರದಬ್ಬಿಸುವೆ" ಎಂದು ಬೊಬ್ಬಿರಿದನು. ಗಾಂಧಿಯವರ ನ್ಯಾಯಬುದ್ಧಿ ಚುರುಕುಗೊಂಡಿತು. ಯಾವ ಅನ್ಯಾಯಕ್ಕಾಗಿ ತಾವು ಹೊರ ನಡೆಯಬೇಕು? "ಪೋಲಿಸೇ ಬರಲಿ, ನಾನಾಗಿ ಹೊರಡೆನು" ಎಂದುಸಿರಿ ಬಿಟ್ಟರು. ಆ ಸೈತಾನ ಬಿಳಿ ದೊರೆಯ ಹಮ್ಮು ಕರಾಳಗೊಂಡಿತು. ಕೂಡಲೇ ಪೋಲಿ

ಸನೊಬ್ಬನನ್ನು ಕರೆಯಿಸಿದನು. ಅವರ ರಟ್ಟೆ ಹಿಡಿದೆಳಸಿ ಹೊರದಬ್ಬಿಸಿದನು. ಸಾಮಾನನ್ನೆಲ್ಲ ಪ್ಲೆಟ್ ಫೋರ್ಮಿನ ಮೇಲೆ ಒಗೆಯಿಸಿದನು. "ನಡೆ ಮೂರನೇ ದರ್ಜೆಯ ಕೂಲಿ ಬಂಡಿ ಏರು" ಎಂದು ಗುಡುಗಿದನು. ಪ್ಲೆಟ್ ಫೋರ್ಮಿನ ಮೇಲೆ ಬಿದ್ದ ಗಾಂಧಿಯವರು ಅಲ್ಲೇ ಸೆಟೆದು ನಿಂತರು. ನ್ಯಾಯ-ಸತ್ಯಕ್ಕಾಗಿ ಆಗ್ರಹತೊಟ್ಟರು. ನೋಡುತ್ತಿದ್ದ ಜನರೆಲ್ಲ "ಅಬ್ಬಬ್ಬ ಕೂಲಿಮ್ಯಾನಿನ ಅಹಂಕಾರವೇ? ಹಾಗೇ ಆಗಬೇಕು" ಎಂದು ಗೊಣಗಿದರು. ಒಬ್ಬಿಬ್ಬರು ಮಾತ್ರ "ಪಾಪ, ಅನ್ಯಾಯವಾಗಿ ಹೊರದಬ್ಬಲ್ಪಟ್ಟ" ಎಂದು ಮರುಗಿದರು.

ಚಳಿಗಾಲ. ಚಳಿಯು ಕರುಳ ವರೆಗೂ ಹರಿದು ಕಟಕಟನೆ ಕಡಿಯುತ್ತಿತ್ತು. ರೈಲುಬಂಡಿ ಹೊರಡುವುದರಲ್ಲಿತ್ತು. ಹತ್ತಿರವಿದ್ದ ಜನರು "ಒಳಗೆಹೋಗು ಮಹಾರಾಯ, ವ್ಯರ್ಥ ಆಗ್ರಹತೊಡಬೇಡ" ಎಂದು ಜಾಣತನ ಬೋಧಿಸಿದರು. ಮೂರನೇ ದರ್ಜೆಯ ಬಂಡಿ ಏರಿಹೋಗುವುದು ಸತ್ಯದ ದಾರಿಯಿಂದ ಉರುಳಿ ಬೀಳುವುದೆಂದು ಅವರಿಗೆ ಕಂಡಿತು. **ಜಾಣತನದಿಂದ ಕಾರ್ಯ ಸಾಧಿಸುವುದಕ್ಕಿಂತ ಸತ್ಯದ ಸಾಧನೆ ಗೈಯುವುದೇ ತನ್ನ ಮೊದಲನೇ ಕರ್ತವ್ಯವೆಂದು** ನಿರ್ಧರಿಸಿದರು. ಹಾಗೆ ನಿರ್ಧರಿಸಿ ಪ್ಲೇಟ್ ಫೋರ್ಮಿನ ಮೇಲೆಯೇ ದೃಢವಾಗಿ ನಿಂತು ಬಿಟ್ಟರು. ಅಹಂಕಾರ, ದ್ವೇಷದ ಉರಿಯಿಂದ ಗಡ-ಗಡನೆ ನಡುಗುತ್ತಿದ್ದ ಉಗಿಬಂಡಿಯು ಕರ್ಕಶವಾಗಿ ಚೀರುತ್ತಾ ಅಸತ್ಯದ ಹೊಗೆ ಹಾರಿಸಿಕೊಂಡು ಹೊರಟೇ ಬಿಟ್ಟಿತು. ಆದರೂ **ಸತ್ಯದ ಮಿಣಮಿಣ ಕಿರಣವೊಂದು ನೊಂದದೆ ಪ್ಲೆಟ್ ಫೋರ್ಮಿನ ಮೇಲೆ ಮಿನುಗುತ್ತಿತ್ತು.**

ಎಲ್ಲಿ ಎಚ್ಚರದಪ್ಪಿ ತಮ್ಮಲ್ಲಿ ಅಸತ್ಯವು ಸುಳಿದು ಬರುವುದೋ ಎಂದು ಯಾವಾಗಲೂ ಅವರು ಜಾಗರೂಕರಾಗಿರುತ್ತಿದ್ದರು. ಆದರೆ ಒಮ್ಮೆ ಅಸತ್ಯವು ಅವರ ಬೆನ್ನು ಹಿಡಿದು ಮೇಲೆ ಬರಲು ಯತ್ನಿಸಿತು. ಆಗ ಗಾಂಧಿಯವರು ಹೇಗೆ ನಿರ್ದಾಕ್ಷಿಣ್ಯವಾಗಿ ಅದರ ತಲೆ ಒತ್ತಿ ತುಳಿದುಬಿಟ್ಟರು ಎಂದು ಬಲ್ಲಿರಾ? ದಕ್ಷಿಣ ಆಫ್ರಿಕದ ಜೋಹಾನ್ಸ್‌ಬರ್ಗಿನ ನ್ಯಾಯಾಲಯದಲ್ಲಿ

ನ್ಯಾಯಾಧೀಶರ ಮುಂದೆ ಮೊಕದ್ದಮೆಯೊಂದನ್ನು ವ್ಯವಹರಿಸುತ್ತಿರುವ ಸಮಯ; ಸಂಪೂರ್ಣ ಸತ್ಯವೆಂದು ನಂಬಿ ತಮ್ಮ ಕಕ್ಷಿಗಾರನ ಪಕ್ಷವಹಿಸಿ ಮಾತಾಡುತ್ತಿದ್ದರು. ಅಷ್ಟರಲ್ಲಿ ಇದಿರ ಕಡೆಯ ವಕೀಲರು ಎದ್ದು ನಿಂತು ಗಾಂಧಿಯವರ ಕಕ್ಷಿಗಾರನಿಗೆ ಅಡ್ಡ ಸವಾಲು ಮಾಡತೊಡಗಿದರು. ಅವರ ಅಡ್ಡ ಸವಾಲುಗಳ ಇರಿತದಿಂದ ಕಕ್ಷಿಗಾರನ ಸುಳ್ಳು ಒಂದೊಂದಾಗಿ ಹೊರ ಬೀಳಲು ತೊಡಗಿತು. ಗಾಂಧಿಯವರು ಅವಾಕ್ಕಾದರು. ಮುಖ ಕೆಂಪಾಯಿತು. "ಅಯ್ಯೋ, ನನ್ನಿಂದ ಸುಳ್ಳಿನ ಸಾಧನೆ!" ಈ ವರೆಗೆ ಸಾಧಿಸಿಕೊಂಡು ಬಂದ ಸತ್ಯವು ತಕ್ಕಡಿಯಲ್ಲಿ ತೂಗುತ್ತಿದ್ದಂತೆ ಕಂಡಿತು. **"ಈ ಅಸತ್ಯ ಸಲ್ಲದು"** ಎಂದು ಥಟಕ್ಕನೆ ಎದ್ದು ನಿಂತರು. ಎಲ್ಲವರೂ ಗಾಂಧಿಯವರನ್ನೇ ಬೆರಗಾಗಿ ನೋಡುತ್ತಿದ್ದರು. ಮಹತ್ತ್ವದ ನಿರ್ಣಯ ಕೈಕೊಂಡಂತಿತ್ತು ಅವರ ಮುಖಮುದ್ರೆ. **"ಈ ಮೊಕದ್ದಮೆ ಈಗಲೇ ನಿಲ್ಲಿಸಲ್ಪಡಲಿ. ಸುಳ್ಳು ಮೊಕದ್ದಮೆಗಾಗಿ ನಾನು ವ್ಯವಹರಿಸೆನು. ನನ್ನ ಕಕ್ಷಿಗಾರನಿಗೆ ಅವಗುಣವಾಗಿ ತೀರ್ಪಾಗಲಿ"** ಎಂದು ಹೇಳಿ ಕುಳಿತೇ ಬಿಟ್ಟರು. ಭಾರದ ಹೊರೆ ತಲೆಯಿಂದ ಇಳಿದಂತಾಯಿತು ಅವರಿಗೆ. ಅವರ ಈ ನಿಷ್ಠುರ ಸತ್ಯವನ್ನು ಕಂಡು ಎಲ್ಲರೂ ದಿಗಿಲುಗೊಂಡರು.

ಗಾಂಧಿಯವರ ಇಡೀ ಜೀವನವೇ ಸತ್ಯದ ಸಾಧನೆ. ದಕ್ಷಿಣ ಆಫ್ರಿಕದಲ್ಲಿ ಭಾರತೀಯರಿಗಾಗಿ ಅಲ್ಲಿನ ಸರಕಾರದ ವಿರುದ್ಧ ಹೋರಾಡಿದರು. **ವರ್ಣದ್ವೇಷದ ಹೊಗೆಯಲ್ಲಿ ಸತ್ಯವು ಮಲಿನಗೊಳ್ಳದಿರಲಿ** ಎಂದು. ಬೋಅರ್ ಯುದ್ಧ, ಜೂಲೂ ಯುದ್ಧ, 1914–18 ಬ್ರಿಟಿಷ್-ಜರ್ಮನಿ ಯುದ್ಧ ಮೊದಲಾದುವುಗಳಲ್ಲಿ ಬ್ರಿಟಿಷ್ ಸರಕಾರದ ಪಕ್ಷ ನಿಂತರು; **ಸೇಡಿನ ಬುದ್ಧಿಯಿಂದ ಸತ್ಯವನ್ನು ನೋಡುವ ಕಣ್ಣು ಕಟ್ಟಿಹೋಗಬಾರದೆಂದು.** ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಶಕ್ತಿಯ ವಿರುದ್ಧವಾಗಿ ಅಸಹಕಾರ ಚಳವಳ ಹೂಡಿದರು; **ರಾಕ್ಷಸ ಶಕ್ತಿಗೆ ಬೆದರಿ ದೈವಿಕ ಸತ್ಯದ ತಲೆ ತಗ್ಗಬಾರದೆಂದು.** ಹೊಲೆಯ ದಂಪತಿಗಳಿಬ್ಬರನ್ನು ತಮ್ಮ ಆಶ್ರಮವಾಸಿಗಳನ್ನಾಗಿ ಮಾಡಿಕೊಂಡರು. ಹೊಲೆಯರು ಹೊಗ್ಗದ ದೇವಸ್ಥಾನಕ್ಕೆ ತಾವು ಹೊಗೆವು ಎಂದು ಹಟತೊಟ್ಟರು, ಉಪವಾಸ ಮಾಡಿದರು; **ಹಿಂದಿನ ಕಾಲ**

ದಿಂದ ನಡೆದು ಬಂದ ಕಟ್ಟು-ಕಟ್ಟಳೆಯ ದಾಸರಾಗಿ ಕಣ್ಣ ಮುಂದಿನಿಂದ ಸತ್ಯದ ದಾರಿ ತಪ್ಪಿ ಹೋಗಬಾರದೆಂದು. ಹಿಂದು—ಮುಸಲ್ಮಾನರ ಐಕ್ಯ ಬೋಧಿಸಿದರು; ಮತ-ಜಾತಿಯ ಹೆಸರಲ್ಲಿ ಆ ಎಲ್ಲ ಮತ ಜಾತಿ ಗಳಿಗೂ ಮಿಗಿಲಾದ ಸತ್ಯದ ಗಂಟಲು ಒತ್ತಿಹೋಗಬಾರದೆಂದು. ಹೀಗೆ ಗಾಂಧಿಯವರ ಜೀವನಕ್ಕೆ ಸತ್ಯವೇ ಲಕ್ಷ್ಯ. ಅಸತ್ಯದಿಂದ ಸತ್ಯದ ಕಡೆಗೆ ನಡೆಯುವುದೇ ಅವರ ಮಾರ್ಗ.

"ಅಸತೋ ಮಾಸದ್ಗಮಯ" ಎಂಬುದೇ ಅವರ ಮಂತ್ರ.

6.

ಅಹಿಂಸಾ ರೀತಿ.

ನೀರನಿತ್ತವಂಗೆ, ಮೃಷ್ಟಾನ್ನ ಉಣ್ಣಿಸಯ್ಯ,
ಶಿರವ ಬಾಗಿಪಂಗೆ, ಸಾಷ್ಟಾಂಗ ವಂದಿಸಯ್ಯ,
ಗುಣಒಂದ ತೋರಿಪಂಗೆ, ದಶಗುಣವ ತೋರಿಸಯ್ಯ,
ಅಪಕಾರ ಗೈವವಂಗೆ, ಉಪಕಾರ ಮರಳಿಸಯ್ಯ,
ತನ್ನ ಪೀಡಿಪಂಗೆ, ತನು ತೊರೆದು ಕರುಣಿಸಯ್ಯ,
ಧರ್ಮವಿಚಾರಿಪಂಗೆ, ಇದು ಧರ್ಮ ಮರ್ಮವಯ್ಯ.

ಗಾಂಧಿಯವರ ಪ್ರಿಯ ಗೀತ.

[ಗುಜರಾತಿಯ "ಪಾಣೀ ಆಪನೆ ಪಾಯ್" ಎಂಬ ಗೀತದ ಭಾವಾನುವಾದ]

——x——

ಗಾಂಧಿಯವರ ಅಹಿಂಸಾರೀತಿ ಒಂದು ಹೊಸ ರೀತಿ. ಅವರ ಈ ಹೊಸರೀತಿಗಾಗಿಯೇ ಇಂದು ಅವರು ಲೋಕವಲ್ಲಿ ಮಹಾತ್ಮರು ಎಂದೆನ್ನಿಸಿ ಕೊಂಡಿದ್ದಾರೆ. ಹಿಂಸೆಗೆ ಪ್ರತಿಹಿಂಸೆ, ಪೆಟ್ಟಿಗೆ ಪ್ರತಿಪೆಟ್ಟು ಎಂಬುದು ಲೋಕದ ರೀತಿ. ಸಣ್ಣ ಪೆಟ್ಟನ್ನು ತಡೆಯಲು ದೊಡ್ಡಪೆಟ್ಟು, ಆ ದೊಡ್ಡ

ಪೆಟ್ಟನ್ನು ತಡೆಯಲು ಮತ್ತೂ ದೊಡ್ಡ ಪೆಟ್ಟು—ಹೀಗೆ ತುದಿಮೊದಲಿಲ್ಲದೆ ಬೆಳೆಯುತ್ತಾ ಹೋಗುತ್ತಿರುವ ಈ ಹಿಂಸೆಯ ಕೋಲಾಹಲಕ್ಕೆ ಕೊನೆ ಎಲ್ಲಿ? **ದೊಣ್ಣೆಯನ್ನು ಕತ್ತಿಯಿಂದ** ತಡೆಯಲು ಸಾಧ್ಯವಾಯಿತೇ? ಹಾಗಿದ್ದರೆ ಊರಿಂದೂರನ್ನೇ ಸುಡುವ **ಎಟಂ ಬೋಂಬನ್ನು** ಮತ್ತೂ ಭಯಂಕರವಾದ **ಹೈಡ್ರೋಜನ್ ಬೋಂಬಿನಿಂದ** ತಡೆಯಲು ಹೇಗೆ ಸಾಧ್ಯವಾಗಬಹುದು? ಆದುದರಿಂದ ಹಿಂಸೆಯಿಂದ ಹಿಂಸೆಯನ್ನು ತಡೆಯುವ ರೀತಿ ಬಿಟ್ಟು, **ಅಹಿಂಸಾ ರೀತಿಯನ್ನು ಅನುಸರಿಸುವುದೇ ಲೋಕದ ಚಿರಶಾಂತಿಯ ದಾರಿ** ಎಂಬ ಈ ಹೊಸ ರೀತಿಯನ್ನು ಗಾಂಧಿಯವರು ತೋರಿಸಿರುತ್ತಾರೆ.

ಈ ಅಹಿಂಸಾ ರೀತಿಯಿಂದಲೇ ದುರ್ಮಾರ್ಗಕ್ಕೆ ಇಳಿದ ಲೋಕವನ್ನು ಸನ್ಮಾರ್ಗಕ್ಕೆ ಎತ್ತಬೇಕೆಂದು ಹೇಳುವ ಅವರು "ಹೊಡೆಯಲು ಬಂದವನಿಗೆ ಹೆದರಿ ಓಡಬೇಡ. **ಹೊಡೆಯುವ ಆ ಕೈಯನ್ನು ಎತ್ತಿ ಮುದ್ದಿಸು** ಒದೆಯಲು ಬಂದ ಕಾಲನ್ನು ನೋಡಿ ಕೆರಳಿ ಕರಾಳನಾಗಬೇಡ. **ನಗುಮುಖದಿಂದ ಆ ಪಾದವನ್ನು ಹಿಡಿದು ಪೂಜಿಸು**. ಇದರಿಂದ ಅಶಾಂತಿಯು ತೊಲಗಿ ಚಿರಶಾಂತಿಯು ನೆಲೆಗೊಳ್ಳುತ್ತದೆ ಎಂದು ಉಪದೇಶಿಸಿದರು. ವಿಚಿತ್ರ ರೀತಿ, ಅಸಾಧ್ಯರೀತಿ 'ಹುಚ್ಚುರೀತಿ' ಎಂದು ಕಾಣುತ್ತದೆಯಲ್ಲವೇ? ಆದರೆ ಈ 'ಹುಚ್ಚು' ರೀತಿಯನ್ನೇ ಆ ಗಾಂಧಿ ಮಹಾತ್ಮರು ತಮ್ಮ ಜೀವನದಲ್ಲಿ ಪ್ರಯೋಗಿಸಿ **"ಹೊಡೆದ ಕೈ ಮುಂದೆ ಪ್ರೀತಿಯಿಂದ ಆಲಂಗಿಸಲು ಬರುತ್ತದೆ; ಒದೆದ ಕಾಲು ಮುಂದೆ ಆದರ ಭಕ್ತಿಯಿಂದ ಪೂಜಿಸಲು ಮಣಿಯುತ್ತದೆ"** ಎಂದು ತೋರಿದ್ದಾರೆ.

"ಒದೆದ ಕಾಲು ಮಣಿಯುತ್ತದೆ" ಎನ್ನುವಾಗ ಅವರ ಜೀವನದೊಳಗಿನ ಇಂಥ ಒಂದು ಘಟನೆ ನೆನಪಿಗೆ ಬರುತ್ತದೆ. ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಹಕ್ಕು-ಸ್ವಾತಂತ್ರ್ಯಗಳಿಗಾಗಿ ಹೋರಾಡುತ್ತಿದ್ದರು ಎಂದು ನಾವು ಓದಿದ್ದೇವೆ. ಆ ಸಮಯ ಅಲ್ಲಿನ ಬಿಳಿಜನರ ಮುಖ್ಯಮಂತ್ರಿ, ಸ್ಮಟ್ಸ್ ದೊರೆಗಳು. ಗಾಂಧಿಯವರ ಹೆಸರು ಕೇಳಿದರೆ ಸಿಡಿಮಿಡಿಯಾಗುತ್ತಿದ್ದರು. ತಮ್ಮ ರಾಜ್ಯದಲ್ಲಿನ ಶಾಂತಿಯು ಈ ದುರಾಗ್ರಹಿ ಗಾಂಧಿಯಿಂದಾಗಿ ನಷ್ಟವಾಗು

ತ್ತಿದೆ ಎಂದು ಗಾಂಧಿಯವರನ್ನು ತಮ್ಮ ಕಡುವೈರಿಯನ್ನಾಗಿ ತಿಳಿಯುತ್ತಿದ್ದರು. ಅವರ ಕಡೆಯ ಪುಂಡರು ಗಾಂಧಿಯವರನ್ನು ಹೊಡೆದರು, ತುಳಿದರು. ಮೈ ಮೇಲೆ ಉಗುಳಿದರು. ಕೊಂದು ಹಾಕುವೆವು ಎಂದು ಬೆದರಿಸಿದರು. ಆದರೂ ಗಾಂಧಿಯವರು ಬೆದರಲಿಲ್ಲ. ಮುಂದಿಟ್ಟ ಹೆಜ್ಜೆ ಹಿಂತೆಗೆಯಲಿಲ್ಲ. ಆ ಬಿಳಿ ಧೂರ್ತರನ್ನಾಗಲೀ ಅವರ ದೊರೆ ಸ್ಮಟ್ಸರನ್ನಾಗಲೀ ತಮ್ಮ ವೈರಿ ಎಂದು ತಿಳಿದು ಅವರಿಗೆ ಕೇಡೆಣಿಸಲಿಲ್ಲ. ಸತ್ಯ–ನ್ಯಾಯಕ್ಕಾಗಿ ತಮ್ಮ ಸತ್ಯಾಗ್ರಹ ಸಮರ ಮಾತ್ರ ಮುಂದರಿಸಿದರು. ತಡೆಯಲಾರದ ಕೋಪದಿಂದ ಪ್ರಧಾನ ಮಂತ್ರಿ ಸ್ಮಟ್ಸ್ ದೊರೆಯು ಈ ಛಲವಾದಿ ಗಾಂಧಿಯವರನ್ನು ಸೆರೆಹಿಡಿದು "ನಿನಗೆ ಬುದ್ಧಿಕಲಿಸುತ್ತೇನೆ" ಎಂದು ಸೆರೆಮನೆಯಲ್ಲಿ ಬಂಧಿಸಿಟ್ಟರು. ಸಾಮಾನ್ಯ ಕೈದಿಗಳ ಜೊತೆಯಲ್ಲಿ ಕೆಲಸ ಮಾಡಿಸಿದರು. ಹಾಗಿದ್ದರೂ ಗಾಂಧಿಯವರಿಗೆ ಸ್ಮಟ್ಸ್ ದೊರೆಗಳ ಮೇಲೆ ಕೋಪ ಬರಲಿಲ್ಲ. ವಿಧೇಯ ರಾಗಿ ಶ್ರದ್ಧೆಯಿಂದ ಸೆರೆಮನೆಯಲ್ಲಿ ಶ್ರಮಿಸಿದರು. ಚರ್ಮ ಹದಮಾಡಿ ಮೆಟ್ಟು ಹೊಲಿಯ ಕಲಿತರು. ಮೊದಲಾಗಿ ಹೊಲಿದ ಈ ಮೆಟ್ಟುಗಳೆರಡನ್ನು ಸೆರೆಮನೆಯಿಂದ ಹೊರಟು ಬರುವ ಸಮಯ ದೇಶದ ಪ್ರಧಾನಮಂತ್ರಿ ಎಂಬ ಆದರದಿಂದ ಸ್ಮಟ್ಸ್ ದೊರೆಗೆ ಕಾಣಿಕೆಯಾಗಿ ಅರ್ಪಿಸಿದರು. ಹಾಗೆ ಅರ್ಪಿ ಸುವ ಸಮಯದ ಗಾಂಧಿಯವರ ಆ ತಿಳಿ ನಗುಮುಖವು ಸ್ಮಟ್ಸ್ ದೊರೆಯ ಆ ಉಗ್ರ ಮುಖದ ಮೇಲಿನ ಉರಿಮೋಡವನ್ನು ಚದರಿಸಿತು. ಏನು ವಿದ್ಯುತ್‌ಶಕ್ತಿಯೋ ಆ ನಗುವಿನಲ್ಲಿ! ಎದೆಯೊಳಗಿನ ಬಂಡೆ ಒಡೆಯಿತು! ಪ್ರೀತಿಯ ತಿಳಿನೀರಿನ ಬುಗ್ಗೆ ಕಾರಂಜಿಯಂತೆ ಚಿಮ್ಮ ತೊಡಗಿತು. ಈ ವರೆಗೆ ವೈರಿ ಗಾಂಧಿಯಾಗಿದ್ದವರು ಮಹಾತ್ಮಾ ಗಾಂಧಿಯಾದರು. ಈ ಮಹಾತ್ಮರ ಮೆಟ್ಟುಗಳನ್ನು ಮೆಟ್ಟುವ ಯೋಗ್ಯತೆ ತನ್ನಲ್ಲಿ ಎಲ್ಲಿಂದ ಬರ ಬೇಕು ಎಂಬ ಭಕ್ತಿಭಾವದಿಂದ ತುಂಬಿ ಬಂದು ಮೊನ್ನೆ ಮೊನ್ನೆ ಸಾಯುವ ವರೆಗೂ ಆ ಮೆಟ್ಟುಗಳನ್ನು ಪೂಜಿಸುತ್ತ ಬಂದರಂತೆ. ಇದು ಅಹಿಂಸೆಯಿಂದ ಹಿಂಸೆಯನ್ನು ಒಲಿಸಿಕೊಂಡ ಒಂದು ನಿದರ್ಶನ. ಇಂಥ ಅನೇಕ ನಿದರ್ಶನ ಗಳು ನಿಮಗೆ ಅವರ ಜೀವನ ಕಥೆಯಿಂದ ದೊರಕುವುವು.

ಸ್ಮಟ್ಸ್ ದೊರೆಗಳು ಬಹುಶಃ ಕರುಣಾಳು; ಆದುದರಿಂದ ಗಾಂಧಿ

ಯವರ ಅಹಿಂಸಾರೀತಿ ಫಲಕಾರಿಯಾಯಿತು; ಆದರೆ ಹಿಟ್ಲರನಂಥ ನರ ರಾಕ್ಷಸ, ಸರ್ವಾಧಿಕಾರಿಯ ಇದಿರಿಗೆ ಈ ಅಹಿಂಸಾರೀತಿ ಫಲಿಸೀತೇ? ಸಾವಿರ ಸಾವಿರ ಯಹೂದ್ಯ ಮಕ್ಕಳು-ಹೆಮ್ಮಕ್ಕಳನ್ನು ಮನಸ್ಸಿನಲ್ಲಿ ಒಂದಿಷ್ಟು ಕೊರಗು ಇಲ್ಲದೆ ಕೊಂದು ಕರಗಿಸಿದ ಆ ಹಿಟ್ಲರ್, ಈ ಗಾಂಧಿ ಮತ್ತು ಗಾಂಧಿ ಅನು ಯಾಯಿಗಳನ್ನು ಚಾಚೂ ಶಬ್ದ ಮಾಡದೆ ನಿಸ್ಸಂತಾನ ಗೈಯನೇ? ಎಂದು ನೀವು ಸಂದೇಹಪಡುತ್ತಿದ್ದಿರಬಹುದು. ಆದರೆ ಗಾಂಧಿಯವರು ನಮ್ಮ ಸಂದೇ ಹಕ್ಕೆ ಶಿರಬಾಗರು. ಬಾಲ್ಯದಿಂದಲೇ ಅವರಲ್ಲಿ ಮೊಳೆದು ಬಂದ ಭಾವವಿದು. ಜೀವನದ ಅನುಭವಗಳ ಕುಲುಮೆಯಲ್ಲಿಟ್ಟು ಪುಟಬರಿಸಿದ ರೀತಿ ಇದು. ''ಬಾಲ್ಯದಿಂದಲೇ'' ಎಂದು ಅನ್ನುವಾಗ ಅವರ ಬಾಲ್ಯದ ಇನ್ನೊಂದು ಘಟನೆ ನೆನಪಿಗೆ ಬರುತ್ತದೆ.

ಮಾಂಸತಿಂದು ಕಳ್ಳತನ ಮಾಡಿದ ಅವರ ದುರ್ನಡತೆಯ ಕಥೆ ನೀವು ಓದಿದ್ದೀರಿ. ಅವರು ತಮ್ಮ ಅಪರಾಧಗಳನ್ನೆಲ್ಲಾ ತಂದೆಗೆ ತಿಳುಹಿ ತಮ್ಮನ್ನು ಕಠಿಣವಾಗಿ ದಂಡಿಸಬೇಕೆಂದು ಬೇಡಿಕೊಂಡರಷ್ಟೆ! ಆದರೆ ಅವರ ತಂದೆಯು ಮಗನನ್ನು ಸಿಟ್ಟಿನಿಂದ ದಂಡಿಸುವ ಬದಲು ತಾವೇ ಕಣ್ಣೀರು ಮಿಡಿದರು. ಪ್ರೀತಿಯ ಕಣ್ಣೀರು ಅದು, ಗಾಂಧಿಯವರ ಕಣ್ಣಿಗೆ ಪಾಪ ನಾಶಿನಿ ಗಂಗೆಯಂತೆ ಕಂಡಿತು. ಅವರ ಹೃದಯದೊಳಗಿನ ಪಾಪದ ಕಶ್ಮಲ ವನ್ನೆಲ್ಲ ಕೊಚ್ಚಿಕೊಂಡು ಹೋಯಿತು. ಅಪರಾಧಗಳನ್ನು ತಡೆಯಲು **ಪ್ರೀತಿಯ ಕಣ್ಣೀರು ಸಿಟ್ಟಿನ ದಂಡನೆಗಿಂತಲೂ ಅಧಿಕ ಪರಿಣಾಮಕಾರಿ** ಎಂದು ಮೊಟ್ಟಮೊದಲು ಅವರ ಮನಸ್ಸಿಗೆ ಹೊಳೆದು ಬಂತು.

ಹೀಗೆ ಬಾಲ್ಯದಲ್ಲಿ ಮೊಳೆದು ಬಂದು ಮುಂದೆ ದಕ್ಷಿಣ ಆಫ್ರಿಕದ ಭೂಮಿಯಲ್ಲಿ ಚಿಗುರಿ ಗಿಡವಾಗಿ, ಮರವಾಗಿ ಬಲಿತು, ಹಿಟ್ಲರನಂಥ ಕಠೋರ ನಿಗೂ ಆಶ್ರಯಕೊಡಲು ಮುಂದೆ ಬಂದ ರೀತಿ ಇದು. ''ಕಠೋರನಾದ ರೇನು? **ಅವನ ಕಠೋರ ಹೃದಯದಲ್ಲೂ ಕರುಣೆಯ ಭಾವ ಹುದುಗಿ ಕೊಂಡಿದೆ.** ಅದನ್ನು ಎಚ್ಚರಿಸಿ, ಚುರುಕುಗೊಳಿಸುವ ಪ್ರಸಂಗ ಬಂದೊದ ಗಲಿ, **ಆ ಕಿಡಿ ಕಾರುವ ಕಠೋರತ್ವವಾದರೂ ಮೃದುಗೊಂಡು ಕರಗಿ,**

ನೀರುನೀರಾಗಿ ಹರಿಯ ತೊಡಗುವುದು. ವಿಶ್ವವನ್ನೇ ಆಲಿಂಗಿಸುವ ವಿಶ್ವಹೃದಯವು ಬೆಳೆದು ಬರುವುದು. ಅಶೋಕನ ನಿದರ್ಶನವನ್ನು ಎಂದೆಂದಿಗೂ ಮರೆಯದಿರಿ'' ಎಂದು ಗಾಂಧಿಯವರು ಸಾರುತ್ತಿದ್ದರು.

ನೀವು ಕೋಟಿ ಪುಣ್ಯ ಗೈದ ಪುಣ್ಯಕೋಟಿಯ ಕಥೆ ಓದಿರಬಹುದು. ಆದರ್ಶ ಸತ್ಯಾಗ್ರಹಿಯ ವಿಜಯದ ಕಥೆ ಅದು. ಆ ಪುಣ್ಯಕೋಟಿಯ ದಾರಿಯೇ ನಮ್ಮ ಮಹಾತ್ಮರ ದಾರಿ.

ಸತ್ಯಾಗ್ರಹಿಯಾಗುವವನು ಮೊದಲು ಮನಸ್ಸಿನ ದುಷ್ಟಭಾವಗಳನ್ನೆಲ್ಲಾ ಒಂದೊಂದಾಗಿ ಇಂಗಿಸಿ ಕೋಟಿ ಪುಣ್ಯ ಗೈದ ಪುಣ್ಯಕೋಟಿಯಂತೆ ಪರಿಶುದ್ಧನಾಗಬೇಕು. ಸತ್ಯ ಪಾಲನೆಯ ಪ್ರಶ್ನೆ ಮುಂದೆ ಬಂದಾಗ ಕೊಂದು ತಿನ್ನುವೆನೆಂಬ ಚಂಡ ವ್ಯಾಘ್ರನ ಸಮ್ಮುಖದಲ್ಲಿ ಸಹ ಬೆದರದೆ, ಕೋಪಿಸದೆ **"ಖಂಡವಿದಕೊ ಮಾಂಸವಿದಕೊ, ಗುಂಡಿಗೆಯ ಬಿಸಿ ರಕ್ತವಿದಕೊ, ಚಂಡವ್ಯಾಘ್ರನೆ, ನೀನ್ ಇದೆಲ್ಲವ ಉಂಡು ಸಂತಸದಿಂದಿರು"** ಎಂದು ತನ್ನನ್ನು ತಾನು ಒಪ್ಪಿಸಿಕೊಳ್ಳಬೇಕು. ಆಗ ಚಂಡವ್ಯಾಘ್ರನ ಚಂಡತ್ವವು ಇಳಿದು ಮೃದುಭಾವುಗಳು ಅಲೆಅಲೆಗಳಾಗಿ, ತೆರೆತೆರೆಗಳಾಗಿ, ಉಕ್ಕಿ ಬರುವುವು. ಹೀಗಿತ್ತು ಮಹಾತ್ಮರ ದೃಢವಿಶ್ವಾಸ. ಆದುದರಿಂದಲೇ ಅವರು ಹಿಟ್ಲರನ ನಾಜೀ ತೋಳಗಳ ನಿರ್ವೀರ್ಯ ಕುರಿಗಳಾಗಿ ಸಾಯುತ್ತಿದ್ದ ಐದು ಮಿಲಿಯ ಯಹೂದ್ಯ ಜನರಿಗೆ "ಸವಿನಯ ಸತ್ಯಾಗ್ರಹ ಆಚರಿಸಿರಿ. ಸಾಲು ಸಾಲಾಗಿ ಸಿಡಿಗುಂಡನ್ನು ಸ್ವಾಗತಿಸಿರಿ" ಎಂದು ಸಲಹೆ ಇತ್ತರು.

ಆದರೆ ಪಂಥ-ಅಸೂಯೆಗಳ ತಿಕ್ಕಾಟಗಳಿಂದ ಅಶಾಂತಗೊಂಡ ಇಂದಿನ ಈ ಯಂತ್ರಯುಗದಲ್ಲಿ ಈ ಅಹಿಂಸಾ ರೀತಿಯ ಮೇಲೆ ಜನರಿಗೆ ವಿಶ್ವಾಸವು ಸುಲಭವಾಗಿ ಬಲಿತು ಬರಲಿಕ್ಕಿಲ್ಲ'' ಎಂದು ಗಾಂಧಿಯವರು ಮನಗಂಡಿದ್ದರು. ಆದುದರಿಂದ ಜನರ ಜೀವನ ರೀತಿಯನ್ನು ಸಹ ಈ ಸತ್ಯ ಅಹಿಂಸೆಯ ಪರಿಪಾಲನೆಗೆ ಅನುಕೂಲವಾಗುವಂತೆ ರೂಪಿಸಬೇಕು. **ಪಂಥ-ಅಸೂಯೆ**ಗಳ ಅಡಿಗಲ್ಲನ್ನು ಅಗೆದು ಹಾಕಿ **ಸಹಕಾರ-ಪ್ರೀತಿಯ** ಅಡಿಗಲ್ಲ

ಮೇಲೆ ನಿಲ್ಲಿಸಬೇಕೆಂದು ನಿರ್ಧರಿಸಿದ್ದರು. ಅದು ಹೇಗೆ ಎಂಬುದನ್ನು ನೀವು ಮುಂದಿನ ಚರ್ಖಾ-ರೀತಿ ಪ್ರಕರಣದಲ್ಲಿ ವಿವರವಾಗಿ ತಿಳಿಯುವಿರಿ.

ಅನುಕೂಲ ಜೀವನ ರೀತಿ ಅಥವಾ ವಾತಾವರಣ ಬಂದೊದಗಿದರೆ ಅಹಿಂಸಾರೀತಿಯ ಮೇಲೆ ಜನರಿಗೆ ನಂಬಿಕೆಯು ಊರಿಬರುವುದು ಎಂದು ಗಾಂಧಿಯವರು ತಮ್ಮ ಅನುಭವದಿಂದ ತೋರಿದ್ದಾರೆ. ಅವರ ಆಶ್ರಮದ ಜೀವನ ರೀತಿಯ ಸತ್ಪರಿಣಾಮವನ್ನು ಸ್ವಲ್ಪ ವಿಚಾರಿಸುವ. ನೀವು ಅವರ ಶಿಷ್ಯೆ ಮೀರಾಬಾಯಿಯ ಹೆಸರನ್ನು ಕೇಳಿರಬಹುದು. ಅವಳು ಒಬ್ಬ ಆಂಗ್ಲ ಎಡ್ಮಿರಲನ ಮಗಳು. ಗಾಂಧಿಯವರ ಆಶ್ರಮಕ್ಕೆ ಬಂದಳು. ಗಾಂಧಿಯವರ ಶಿಷ್ಯತ್ವವು ದೊರಕಬೇಂದು ಅವರ ಕಟ್ಟಪ್ಪಣೆಯಂತೆ ಒಂದು ವರ್ಷ ಕಕ್ಕಸದ ತೊಟ್ಟಿ ಎತ್ತುವ ಕೆಲಸ ಮಾಡಿದಳು.

ರಾಜ ದರ್ಬಾರಿನಿಂದ ಮೆರೆಯುತ್ತಿದ್ದ ಮೋತಿಲಾಲರು, ಗಾಂಧಿಯವರ ಅಹಿಂಸಾ ರೀತಿಯನ್ನು ಒಂದು ಹಾಸ್ಯವೆಂದು ಹಾರಿಸಿ ಮಾತಾಡುತ್ತಿದ್ದವರು, ಮುಂದೆ ಗೋಣಿ ಖದ್ದರ್ ಧರಿಸಿ, ಆಶ್ರಮದ ಓಲೆ ಚಾಪೆಯಲ್ಲಿ ಕುಳಿತರು. ಗಾಂಧಿಯವರೊಂದಿಗೆ ಜೇಲು ಮನೆ ನುಗ್ಗಿದರು. ಗಫರ್ ಖಾನರಂಥ ಹಿಂಸಾಪ್ರಿಯ ಪಠಾನ ಗೃಹಸ್ಥರು; ತಮ್ಮ ಜನರೊಡನೆ ಗಾಂಧಿಯವರ ಅಹಿಂಸಾರೀತಿಯ ಪ್ರಭಾವಕ್ಕೆ ಒಳಗಾದರು. ಕಣ್ಣಮುಂದೆ ಹರಿದು ಹೋಗುತ್ತಿರುವ ಸರ್ಪ ಒಂದನ್ನು ನೋಡಿ ಸಹ ಕೊಲ್ಲದೆ "ಪಾಪ, ಹೋಗಲಿ" ಎಂದು ಕನಿಕರಗೊಳ್ಳುವಷ್ಟು ಅಹಿಂಸಾ ಪ್ರಿಯರಾದರು.

ಪ್ರಾಚೀನ ಕಾಲದಲ್ಲಿ ಋಷಿ-ಮುನಿಗಳ ಆಶ್ರಮದ ಶಾಂತವಾತಾವರಣದಲ್ಲಿ ತೋಳ ಮತ್ತು ಕುರಿ, ಹುಲಿ ಮತ್ತು ದನ ಒಂದಾಗಿ ಸೇರಿ ನೀರು ಕುಡಿಯುತ್ತಿದ್ದುವಂತೆ. ಚಿಗರಿ ಮರಿ ಮತ್ತು ಚಿರತೆ ಮರಿ ಕಲೆತು ಆಡುತ್ತಿದ್ದುವಂತೆ. ಅಂತೆ-ಕಂತೆಯ ಕಟ್ಟುಕಥೆ ಎಂದು ನಾವು ಭಾವಿಸಿದ್ದೆವು. ಆದರೆ ಗಾಂಧಿಯವರು "ಅನುಕೂಲವಾತಾವರಣದಲ್ಲಿ ಸಿಂಹ, ಹುಲಿ ಮೊದಲಾದ ಕಾಡು ಪ್ರಾಣಿಗಳು ಸಹ ತಮ್ಮ ಹಿಂಸ ಬುದ್ಧಿ ಬಿಟ್ಟು ಕೊಡುವುದು

ಸಾಧ್ಯವಾಗಬಹುದು'' ಎಂದು ತಮ್ಮ ಜೀವನದ ಪ್ರಯೋಗ ಶಾಲೆಯಲ್ಲಿ ಸಾಧಿಸಿ ತೋರಿದರು.

ಜನರ ಯಾವ ರೋಗಕ್ಕಾದರೂ ಗಾಂಧಿಯವರ ಚಿಕಿತ್ಸೆ ಒಂದೇ: ಅಹಿಂಸಾರೀತಿ. ಮನೆಗೆ ಕನ್ನಹಾಕಿ ಕಳ್ಳತನ ಮಾಡುವ ಕಳ್ಳನನ್ನು ಅಹಿಂಸಾ ರೀತಿಯಿಂದ ಹೇಗೆ ತಡೆಯಲಿ? ಎಂಬ ಪ್ರಶ್ನೆ ಒಮ್ಮೆ ಮುಂದೆ ಬಂತು. ಸೇವಾ ಗ್ರಾಮದಲ್ಲಿ ಒಮ್ಮೆ ಒಬ್ಬ ರೈತನ ಮನೆಗೆ ಕಳ್ಳನು ಹೊಕ್ಕನು. ಆ ರೈತನು ಗಾಂಧಿಯವರಲ್ಲಿ ತಲೆತಲೆ ಹೊಡಕೊಳ್ಳುತ್ತಾ ದೂರು ತಂದನು. ಗಾಂಧಿಯವರು ''ಕಳ್ಳನ ಮೇಲೆ ಕೋಪಿಸಬಾರದು, ಕರುಣೆ ದೋರಬೇಕು. ರೋಗದಿಂದ ನರಳುವ ಮನುಷ್ಯನನ್ನು ದಂಡಿಸುವುದು ಸರಿಯೇ? ಹಾಗೆಯೇ ಕಳ್ಳತನವು ಒಂದು ಮಾನಸಿಕ ರೋಗ. ಸರಿಯಾದ ಮಾನಸಿಕ ಚಿಕಿತ್ಸೆಯಿಂದ ಗುಣಪಡಿಸಬೇಕು'' ಎಂದರು.

ಒಬ್ಬ ಮಿತ್ರರು ''ದಾರಿ ತಪ್ಪಿ ನಡೆಯುವ ಮಕ್ಕಳನ್ನು ಸರಿದಾರಿಗೆ ತರುವ ಘನಉದ್ದೇಶದಿಂದ ದಂಡಿಸುವ ಪ್ರಸಂಗ ಬಾರದೇ?" ಎಂದು ಕೇಳಿದರು.

ಗಾಂಧಿಯವರು: ''ಅನುಕೂಲವಾತಾವರಣದಲ್ಲಿ ಮಕ್ಕಳು ದಾರಿ ತಪ್ಪಿ ಹೋಗುವುದೇ ಇಲ್ಲ. ಒಂದು ವೇಳೆ ಹೋದರೂ ಹಿಂಸಾ ರೀತಿಯ ದಂಡನೆಯು ಸರಿದಾರಿಗೆ ತರುವ ಉಪಾಯವಲ್ಲ. ನನ್ನ ಆಶ್ರಮದಲ್ಲಿ ಇಬ್ಬರು ಮಕ್ಕಳು ನೀತಿ ತಪ್ಪಿ ದುರ್ಮಾರ್ಗಕ್ಕೆ ಇಳಿಯಲು ನನ್ನಲ್ಲಿನ ದೋಷವೇ ಕಾರಣ'' ಎಂದು ಭಾವಿಸಿ ''ನನ್ನ ದೋಷ ನಿವಾರಣೆಗೆ" ಎಂದು ಎಂಟು ದಿನ ಉಪವಾಸ ಕೈಕೊಂಡೆ. ಮುಂದೆ ಆ ಮಕ್ಕಳು ಕನಸಿನಲ್ಲೂ ತಮ್ಮ ದುರ್ನಡತೆಯನ್ನು ಯೋಚಿಸಿದ್ದು ನನಗೆ ತಿಳಿದು ಬರಲಿಲ್ಲ''.

ಆ ಮಿತ್ರರು ಪುನಃ ಮಾತು ಮುಂದರಿಸಿ ''ನನ್ನ ಪತ್ನಿಯು ನಿತ್ಯ ರೋಗಿ. ಪಥ್ಯಮಾಡಲು ನಿರಾಕರಿಸುವಳು. ನಿಮ್ಮ ಅಹಿಂಸಾರೀತಿಯಿಂದ ಅವಳನ್ನು ಪಥ್ಯಮಾಡುವಂತೆ ಹೇಗೆ ಪ್ರೇರಿಸಬಹುದು ಎಂದು ಪ್ರಶ್ನಿಸಿದರು.

ಗಾಂಧಿಯವರು, "ನನ್ನ ಸತ್ಯಾಗ್ರಹವೇ ಸರಿಯಾದ ಉಪಾಯ. ನೀವೇ ಪಥ್ಯಮಾಡ ತೊಡಗಿರಿ; ನಿಮ್ಮ ಪತ್ನಿಯವರು ಸರಿದಾರಿಗೆ ಬರುವರು. ನನ್ನ ಕಸ್ತೂರಿ ಬಾ ಒಮ್ಮೆ ಪಥ್ಯಕ್ಕಾಗಿ ಉಪ್ಪು ಮತ್ತು ಬೇಳೆ-ಬಿಡಲು ನಿರಾಕರಿಸಿದಾಗ ನಾನು ಕೈಕೊಂಡ ಉಪಾಯವು ಸತ್ಯಾಗ್ರಹ. ಒಂದು ವರ್ಷದ ತನಕ ಉಪ್ಪು ಮತ್ತು ಬೇಳೆ ಸೇವಿಸೆನು ಎಂದು ಪ್ರತಿಜ್ಞೆಗೈದೆ. ಮುಂದೆ ಎಲ್ಲವೂ ಸುಗಮವಾಯಿತು" ಎಂದು ಮಿತ್ರರ ಮುಖ ನೋಡಿದರು. ಮಿತ್ರರು "ನೀವು ಮಹಾತ್ಮರು" ಎಂದು ಮಣಿದರು.

ಹಿಂದೂ ಸಮಾಜದ ಒಂದು ಕಲಂಕ 'ಅಸ್ಪೃಶ್ಯತೆ'. ಮೇಲುಜಾತಿಯ ಜನರನ್ನು ಕಾಲುಹಿಡಿದು ಬೇಡಿಕೊಂಡರು. ಈ ಕಲಂಕವು ಸರಿಯಲ್ಲ ಎಂದು ಧರ್ಮದ ಆಧಾರಕೊಟ್ಟು ತೋರಿದರು. ಆದರೆ ಸಂಪ್ರದಾಯಕ್ಕೆ ಬಲಿಬಿದ್ದ ನಮ್ಮ ಜನರು ಎಲ್ಲಿ ಕೇಳಬೇಕು? ಸತ್ಯಾಗ್ರಹವಲ್ಲದೆ ಬೇರೆ ದಾರಿ ಇಲ್ಲ ಎಂದು ಗಾಂಧಿಯವರಿಗೆ ಕಂಡಿತು. ಜಾತಿಯ ಮೇಲ್ತನದ ಸೂಚಕವಾದ ತಮ್ಮ ಜನಿವಾರವನ್ನು ತೆಗೆದು ಹಾಕಿ "ನಾನು ಒಬ್ಬ ಅಸ್ಪೃಶ್ಯ ಹರಿಜನ" ಎಂದು ಸಾರಿದರು. ಆದರೂ ಹೊಲೆತನದ ಮೈಲಿಗೆಯಿಂದ ಮಲಿನಗೊಂಡ ನಮ್ಮ ಜನರ ಹೃದಯದಲ್ಲಿ 'ಹೊಲೆಯರು ನಮ್ಮವರು' ಎಂಬ ಭಾವ ಮೂಡಲಿಲ್ಲ. ಹರಿಜನ ದಂಪತಿಗಳಿಬ್ಬರನ್ನು ಆಶ್ರಮ ವಾಸಿಗಳನ್ನಾಗಿ ಮಾಡಿಕೊಂಡರು. ಇನ್ನೂ ಕುರುಡು ನಂಬಿಕೆಯ ಕುರುಡುತನ ತೊಲಗಲಿಲ್ಲ. ಕೊನೆಗೆ ಮೇಲುಜಾತಿಯವರು ಮಾಡಿದ ಪಾಪವನ್ನು ತೊಳೆಯುವುದಕ್ಕಾಗಿ 'ಉಪವಾಸಗೈವೆನು' ಎಂದು ಉಪವಾಸ ಕೈಕೊಂಡರು. ಕಣ್ಣು ತೆರೆದ ಜನರು ಮೆಲ್ಲಮೆಲ್ಲನೆ ಹರಿಜನರನ್ನು ಸಾರ್ವಜನಿಕ ಸ್ಥಳಗಳಿಗೆ ಬರಮಾಡಿಕೊಂಡರು. ಇಂದು ಧರ್ಮ-ಸಹೋದರ, ಹರಿಜನರ ಮೇಲ್ಮೆಯು ಸಾಧಿಸಿ ಬಂದಿದ್ದರೆ, ಅದು ಗಾಂಧಿಯವರ ಸತ್ಯಾಗ್ರಹದ ಪ್ರಭಾವದಿಂದ.

ಹಿಂದುಸ್ಥಾನದ ಸ್ವಾತಂತ್ರ್ಯವು ಅವರಿಗೆ ತಮ್ಮ ಪ್ರಾಣಕ್ಕಿಂತಲೂ ಪ್ರಿಯವಾಗಿತ್ತು. ಮೂರು-ನಾಲ್ಕು ಸರ್ತಿ ಸತ್ಯಾಗ್ರಹ ಹೂಡಿದ್ದರೂ ಸ್ವಾತಂತ್ರ್ಯವು ದೊರೆಯಲಿಲ್ಲ. ಆಗ ಅವರ ಮಿತ್ರ ಸುಭಾಷ್‌ಚಂದ್ರಬೋಸ

ರು "ಈ ಸೋಲು ನಿಮ್ಮ ಸತ್ಯಾಗ್ರಹದ ಸೋಲಲ್ಲವೇ?" ಎಂದು ಕೇಳಿದರು.

ಗಾಂಧಿಯವರು "ನಿಮ್ಮ ದೃಷ್ಟಿಯಲ್ಲಿ ಸೋಲಾಗಿರಬಹುದು. ಆದರೆ ನನಗೆ ಇದು ಸೋಲಲ್ಲ. ಗೆಲವಿನ ದಾರಿ. ಆದರ್ಶ ಸತ್ಯಾಗ್ರಹಿಯಾಗುವ ರೀತಿ". ಎಂದು ಉತ್ತರವಿತ್ತರು.

"ಹಿಂಸಾ ರೀತಿಯಿಂದ ನಾವು ಸ್ವಾತಂತ್ರ್ಯಗಳಿಸಬಾರದೇಕೆ? ಅದು ನಮ್ಮ ಜನ್ಮ ಸಿದ್ಧ ಹಕ್ಕು" ಎಂದು ಸುಭಾಷ್ ಬೋಸರು ಪುನಃ ಪ್ರಶ್ನಿಸಿದರು. "ಆ ರೀತಿ ನನಗೆ ಸಲ್ಲದು. ಸ್ವಾತಂತ್ರ್ಯವು ನನಗೆ ಎಷ್ಟು ಪ್ರಿಯವೋ ಅಷ್ಟೇ ಅದನ್ನು ಸಾಧಿಸುವ ಅಹಿಂಸಾ ರೀತಿಯು ನನಗೆ ಪ್ರಿಯವು. ಬ್ರಿಟಿಷರ ಒಡೆತನವನ್ನು ವಿರೋಧಿಸುವೆನು. ಅದರೆ ಬ್ರಿಟಿಷ್ ಜನರನ್ನು ಪ್ರೀತಿಸುವೆನು. ಸ್ವಾತಂತ್ರ್ಯದ ಹೆಸರಲ್ಲಿ ನನ್ನ ಹೃದಯವನ್ನು ಹಿಂಸೆಯ ದಳ್ಳುರಿಯಿಂದ ಸುಡೆನು. ನಾನು ಆದರ್ಶ ಸತ್ಯಾಗ್ರಹಿಯಾಗಿದ್ದರೆ ನನ್ನ ಅಹಿಂಸಾರೀತಿಯು ಬ್ರಿಟಿಷರ ಸಾಮ್ರಾಜ್ಯಲಾಲಸೆಯನ್ನು ತಣಿಸಿ ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಿಸೀತು" ಎಂದು ಅಹಿಂಸಾರೀತಿಯಲ್ಲಿ ತಮ್ಮ ಅಚಲವಿಶ್ವಾಸವನ್ನು ತೋರಿದರು.

ಗಾಂಧಿಯವರ ಜೀವನದ ಒಂದೇ ಒಂದು ಮಹಾದಾಶೆ, **"ನನ್ನ ಭಾರತದಲ್ಲಿ ಸತ್ಯಾಗ್ರಹಿ ವೀರರ ಸೈನ್ಯ ಒಂದು ಹುಟ್ಟಿ ಬರಲಿ. ಅದು ಜಗತ್ತಿನ ರಾಕ್ಷಸ-ಶಕ್ತಿಯನ್ನು ಇದಿರಿಸಲಿ. ಇದಿರಿಸಿ ತಮ್ಮ ದೈವಿಕ ಶಕ್ತಿಯಿಂದ ಆ ರಾಕ್ಷಸ ಶಕ್ತಿಯನ್ನು ಗೆಲ್ಲಲಿ. ಹುಚ್ಚು ಹಿಂಸೆಯಿಂದ ದಾರಿ ತಪ್ಪಿದ ಜಗತ್ತಿಗೆ ಒಂದು ಹೊಸ ದಾರಿಯನ್ನು ತೋರಲಿ"**ಎಂದು.

"ಅಹಿಂಸಾಪರಮೋಧರ್ಮಃ"ಎಂದು ಬುದ್ಧನು ಉಪದೇಶಿಸಿದನು. "ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆ ನೀಡು" ಎಂದು ಯೇಸು ಕ್ರಿಸ್ತನು ಹೇಳಿದನು. ಆ ಇಬ್ಬರು ಮಹಾತ್ಮರು ತುಳಿದ ದಾರಿಯಲ್ಲಿ ನಮ್ಮನ್ನೆಲ್ಲ ನಡೆಯಿಸಿಕೊಂಡು ಹೋಗುವ ಆಗ್ರಹ ತೊಟ್ಟವರು ನಮ್ಮ ಮಹಾತ್ಮರು.

ಹೀಗಿದೆ ಗಾಂಧಿಯವರ ಈ ಹೊಸ ರೀತಿ: ಅಹಿಂಸಾರೀತಿ.

ಅಹಿಂಸೆಯಿಂದ ಹಿಂಸೆಯನ್ನು ಗೆಲ್ಲುವ ರೀತಿ. ವಿನಯದಿಂದ ದರ್ಪವನ್ನು ಕರುಣೆಯಿಂದ ಕಾಠಿಣ್ಯವನ್ನು, ಸ್ನೇಹದಿಂದ ದ್ವೇಷವನ್ನು ಗೆಲ್ಲುವ ರೀತಿ. ಮೃತ್ಯುವಿನಿಂದ ಅಮೃತತ್ವದ ಕಡೆಗೆ ಸಾಗುವ ರೀತಿ.

"ಮೃತ್ಯೋರ್ಮಾಽಮೃತಂಗಮಯ" ಎಂಬುದು ಗಾಂಧಿಯವರ ಮಂತ್ರ.

1.

ಚರಖಾರೀತಿ.

ಸತ್ಯದ ಶೋಧನೆಗೆ ಹೊರಟ ಗಾಂಧಿಯವರು ಅಹಿಂಸೆಯೇ ಸತ್ಯ-ಸಿದ್ಧಿಯ ಮಾರ್ಗ ಎಂದು ಮನಗಂಡರು. ಆದರೆ ಇಂದಿನ ವಾತಾವರಣವು ಈ ಅಹಿಂಸೆಯ ಮಾರ್ಗದಲ್ಲಿ ನಡೆಯಗೊಡುವುದೇ? ಮನುಷ್ಯನು ಆಶೆ-ಮಹಾಕಾಂಕ್ಷೆಗಳಿಂದ ಉದ್ರೇಕಗೊಂಡು "ಹೆಚ್ಚು ಬೇಕು" ಎಂಬ ಹುಚ್ಚಿನಿಂದ ಮುಂದೆ ಮುಂದೆ ಉಸಿರುಗಟ್ಟಿ ಓಡುತ್ತಿದ್ದಾನೆ; ಅಡ್ಡ ಬಂದವರನ್ನು ಉರುಳಿಸುತ್ತಾನೆ; ಕೈಲಾಗದೆ ಹೋದರೆ ಅಸೂಯೆಯ ಬೇಗೆಯಿಂದ ಬೇಯುತ್ತಿದ್ದಾನೆ; ಪಂಥತೊಡುತ್ತಿದ್ದಾನೆ; ಶಪಿಸುತ್ತಿದ್ದಾನೆ. ಸ್ವೈರಣೆಗೆಟ್ಟ ಈ ಮನುಷ್ಯನು ಅಹಿಂಸೆಯ ಮಾರ್ಗದಲ್ಲಿ ಒಂದು ತೊಡಕು. ಅವನನ್ನು ಅಹಿಂಸೆಯ ಮಾರ್ಗಕ್ಕೆ ಒಲಿಸಬೇಕು. ಹೇಗೆ ಒಲಿಸಲಿ? ಗಾಂಧಿಯವರು **ಚರಖಾ**ವನ್ನು ಹಿಡಿದು ದೇಶದ ಜನರೆಲ್ಲರ ಮುಂದೆ ಬಂದು ನಿಂತರು; ಶ್ರೀ ಕೃಷ್ಣನು ಸುದರ್ಶನ ಚಕ್ರವನ್ನು ಹಿಡಿದು ಮುಂದೆ ಬಂದಂತೆ.

ಗಾಂಧಿಯವರ ಈ ಚರಖಾವು ಅವರು ಕೈಕೊಂಡ ಸರಳ ಜೀವನ ಕ್ರಮದ ಒಂದು ಹೆಗ್ಗುರುತು. ಅವರು ಹೋದಲ್ಲೆಲ್ಲ ಈ ಚರಖಾವು ಹೋಗುತ್ತಿತ್ತು. ದೊಡ್ಡ ದೊಡ್ಡ ಸಭೆಗಳಲ್ಲೂ ಬಿಡುವಿದ್ದಾಗ ಅದು ತಿರುಗುತ್ತಿತ್ತು. ಭಾಷಣದಲ್ಲಿ ಸಹ "ಚರಖಾ ತಿರುಗಿಸಿರಿ; ನೂಲು ತೆಗೆಯಿರಿ;

ವಸ್ತ್ರ ನೇಯಿರಿ; ಅದನ್ನೇ ಧರಿಸಿಕೊಳ್ಳಿರಿ. ಆಗ ನಿಮ್ಮ ಸ್ವರಾಜ್ಯವು ನಿಮ್ಮ ಅಂಗೈ ಮೇಲೆ" ಎಂದು ಹೇಳುತ್ತಿದ್ದರು.

ಅವರ ಆ ಮಾತುಗಳಲ್ಲಿ ಅದೇನು ಮಂತ್ರಶಕ್ತಿಯೋ! ಕೇಳಿ, ತಲೆದೂಗಿದ ನಾವೆಲ್ಲರೂ ಚರಖಾದ ದಾಸರಾದೆವು. ಮನೆ ಮನೆ ಚರಖಾ. ನೂಲು ತೆಗೆಪು, ವಸ್ತ್ರ ನೇಯುವ ಸಂಭ್ರಮ. ನಮ್ಮೂರಿನ ಸಾವಿರ ಮುಡಿ ವರಮಾನವಿದ್ದ ಒಬ್ಬಿಬ್ಬರು ಧನಿಕರು ಸಹ ಈ ಉತ್ಸಾಹದ ಭರದಲ್ಲಿ ಖದ್ದರ್ ಮೂಟೆ ಹೊತ್ತುಕೊಂಡು ಮನೆ ಮನೆಗೆ ಹೋಗಿ ಮಾರುತ್ತಿದ್ದರು! ಹೀಗಿತ್ತು ಗಾಂಧಿಯವರ ಈ ಚರಖಾ-ಖದ್ದರಿನ ಹಿಡಿತ.

ಉತ್ಸಾಹದ ಆವೇಗ ಇಳಿಯುತ್ತಾ ಬಂತು. "ಚರಖಾ ಏಕೆ ಬೇಕು?" ಎಂಬ ಪ್ರಶ್ನೆ ಎದ್ದು ಬಂತು. "ವಿದೇಶಿಯನ್ನು ತಡೆದು ಸ್ವದೇಶಿಯನ್ನು ಪ್ರೋತ್ಸಾಹಿಸುವುದಕ್ಕಾಗಿ". "ಸ್ವದೇಶಿಯ ಪ್ರೋತ್ಸಾಹವೇಕೆ?" "ಬಟ್ಟೆಗಾಗಿ ವೆಚ್ಚ ಮಾಡುವ ನಮ್ಮ ಹಣವು ವಿದೇಶಕ್ಕೆ ಸಾಗದಿರಲಿ, ಸ್ವದೇಶದಲ್ಲೇ ಉಳಿದು ನಮ್ಮ ಸಂಪತ್ತು ಹೆಚ್ಚಲಿ" ಎಂದು. ಹೀಗೆ ವಿಚಾರಿಸಲು ತೊಡಗಿದ ನಮಗೆ ಮನೆ ಮನೆ ನೂಲು ತೆಗೆದು ಬಟ್ಟೆ ನೇಯುವುದು ಬೇಡದ ಕೆಲಸವೆಂದು ತೋರಿತು. ಸ್ವದೇಶದ ಪ್ರೇಮಕ್ಕಾಗಿ ಖದ್ದರ್ ಧರಿಸಬೇಕು ಎಂಬುದು ನಮ್ಮ ಸಿದ್ಧಾಂತವಾಯಿತು.

ಮುಂದೆ, ಇದಿರಿನ ಅಂಗಡಿಗಳಲ್ಲಿ ಗಿರಣಿಯ ನಯ–ನುಣುಪಿನ ವಸ್ತ್ರಗಳು ಕಡಿಮೆ ಕ್ರಯಕ್ಕೆ ಸಿಗುತ್ತಿರುವುದನ್ನು ನೋಡಿದೆವು. ಅವುಗಳ ಬೆಡಗಿಗೆ ಮನಸೋತ ನಾವು "ಬಟ್ಟೆ ಖದ್ದರಾದರೇನು? ಗಿರಣಿಯದಾದರೇನು ಎಲ್ಲವು ಸ್ವದೇಶಿಯೇ" ಎಂಬ 'ಅನುಕೂಲಶಾಸ್ತ್ರ'ಕ್ಕೆ ಬಲಿಬಿದ್ದು ಖದ್ದರಿನ ಪ್ರತಿಯಾಗಿ ಗಿರಣಿಯ ಸ್ವದೇಶಿ ವಸ್ತ್ರ (ಮಿಲ್ ಖದ್ದರ್) ಉಡಲು ತೊಡಗಿದೆವು. ಗಾಂಧಿಯವರು ಬೋಧಿಸಿದ 'ಸರಳ ಜೀವನದ ರಹಸ್ಯವು ಈ ಚರಖಾ–ಖದ್ದರಿನಲ್ಲಿ ಅಡಗಿದೆ ಎಂಬುದು ನಮ್ಮ ಸಣ್ಣ ಬುದ್ಧಿಗೆ ಹೇಗೆ ತೋರಿ ಬರಬೇಕು?

ಸ್ವದೇಶಿಯ ಅಪಾರ್ಥ ಹೀಗೆ ನಡೆಯುತ್ತಿರುವುದನ್ನು ನೋಡಿ ಗಾಂಧಿಯವರು "ಸ್ವದೇಶ ಎಂದರೆ ವಿದೇಶಿಯ ವಿರೋಧ ಎಂದು ತಿಳಿಯ ಬಾರದು. ಸ್ವಾವಲಂಬನದ (ಸ್ವರಾಜ್ಯದ) ಮೂಲ ಎಂದು ತಿಳಿಯಬೇಕು. ಪ್ರತಿ ಒಂದು ಮನೆಯವರೂ ತಮಗೆ ಬೇಕಷ್ಟು ಬಟ್ಟೆಯನ್ನು ತಾವೇ ತಯಾರಿಸಬೇಕು. ಅದು ಕೈಲಾಗದೆ ಹೋದರೆ, ತಮ್ಮ ತಮ್ಮ ಹಳ್ಳಿಯಲ್ಲಿ ತಯಾರಾದ ಖದ್ದರನ್ನಾದರೂ ಕೊಂಡುಕೊಳ್ಳಬೇಕು. ನನ್ನ ಸ್ವದೇಶಿಯು ಗಿರಣೀ ಸ್ವದೇಶಿಯಲ್ಲ, ಚರಖಾ ಸ್ವದೇಶಿ. ಹಳ್ಳಿಯ ಸ್ವಾವಲಂಬನವನ್ನು ನಷ್ಟಪಡಿಸುವ ಎಲ್ಲ ಯಂತ್ರಗಳೂ ನನ್ನ ಸ್ವದೇಶಿಯ ವಿರೋಧಿಗಳು. ಗಿರಣಿ ಬಟ್ಟೆಯ ವ್ಯಾಮೋಹಕ್ಕೆ ಸಿಲುಕಿ ಸ್ವದೇಶಿಯ ಅಪಾರ್ಥ ಮಾಡದಿರಲಿ" ಎಂದು ಎಚ್ಚರಿಸಿದರು.

ಗಾಂಧಿಯವರ ಈ ಮಾತುಗಳಿಂದ ನಮ್ಮ ಸ್ವದೇಶಿ ಪ್ರೇಮದ ಮೇಲೆ ತಣ್ಣೀರು ಎರಚಿದಂತಾಯಿತು. ಅವರು ಗಿರಣಿ-ಯಂತ್ರಗಳನ್ನು ವಿರೋಧಿಸುವವರು ಎಂದು ನಾವು ಭಾವಿಸಿದ್ದಿಲ್ಲ. "ಹಳ್ಳಿಯ ಸ್ವಾವಲಂಬನವೆಂದು ಗಿರಣಿ ಯಂತ್ರಗಳು ಒದಗಿಸುವ ಸಂಪತ್ತು-ಸಮೃದ್ಧಿಯಿಂದ ನಮ್ಮನ್ನು ನಾವು ವಂಚಿಸಿಕೊಳ್ಳುವುದೇ? ವಸ್ತು-ಒಡವೆಗಳ ಅಭಾವ-ಕೊರತೆಗಳಿಂದ ಯಾತನೆ ಪಡುತ್ತಿರುವ ನಮ್ಮ ದೇಶದಲ್ಲಿ ಅಲ್ಲಲ್ಲಿ ಯಂತ್ರ-ಕಾರಖಾನೆಗಳ ಪ್ರತಿಷ್ಠಾಪನೆ ನಡೆಯಬೇಕು. ಹೇರಳ ವಸ್ತು-ಒಡವೆಗಳು ತುಂಬಿ ಬರಬೇಕು. ಕ್ರಯ ಇಳಿಯಬೇಕು. ಈಗಿನಂತೆ ನಾಲ್ಕು ಗಿರಣಿ ವಸ್ತ್ರಗಳ ಕ್ರಯವನ್ನು ಒಂದು ಖದ್ದರ್ ತುಂಡಿಗೆ ಕೊಡುತ್ತಾ ಬರುವುದಲ್ಲ" ಎಂದು ಗಾಂಧಿಯವರನ್ನು ಟೀಕಿಸತೊಡಗಿದೆವು. ಅವರ ಆ ಸತ್ಯ-ಅಹಿಂಸೆ ಏನು? ಆ ಚರಖಾದ ಮರ್ಮವೇನು? ಎಂದು ಒಳಹೊಕ್ಕು ನೋಡುವ ಆ ದಿವ್ಯ ದೃಷ್ಟಿಯು ನಮಗೆಲ್ಲಿ ಹೊಳೆದು ಬರಬೇಕು?

ಅಲ್ಲಲ್ಲಿ ಯಂತ್ರ-ಕಾರಖಾನೆಗಳು ಎದ್ದು ಬಂದುವು. ಸಂಸ್ಥಾಪಕರಾದ ಮಾಲಿಕ ಜನರು "ಇದು ನಮ್ಮ ದೇಶಪ್ರೇಮ, ಸ್ವಾರ್ಥತ್ಯಾಗ. ದೇಶದ ಉದ್ಧಾರಕ್ಕೆ ಟೊಂಕ ಕಟ್ಟಿದ್ದೇವೆ, ಗಾಂಧೀಕೀ ಜೈ" ಎಂದು ಗಾಂಧಿ

ಯವರ ಹೆಸರು ಹೇಳಿ ದೊಡ್ಡ ದೊಡ್ಡ ಮಾತುಗಳನ್ನು ಆಡತೊಡಗಿದರು. ಈ ಅಪಪ್ರಚಾರವು ಗಾಂಧಿಯವರಿಂದ ಸಹಿಸಲಾಗಲಿಲ್ಲ. "ನನ್ನ ಹೆಸರು ಹೇಳಿ ನನ್ನ ಸ್ವರಾಜ್ಯದ ಕೊಲೆ ನಡೆಯತೊಡಗಿದೆ. ಸ್ವದೇಶದ ಯಂತ್ರ-ಕಾರಖಾನೆಗಳು ನನ್ನ ಸ್ವರಾಜ್ಯವನ್ನು ಸಾಧಿಸುವ ಸಾಧನಗಳು ಎಂದು ಹೇಳಲಾಗುತ್ತಿವೆ. ಯಂತ್ರ-ಕಾರಖಾನೆಗಳು ವಿದೇಶದವುಗಳಾಗಿರಲಿ, ಅಥವಾ ಸ್ವದೇಶದವುಗಳಾಗಿರಲಿ, ನಾನು ಅವನ್ನು ವಿರೋಧಿಸುತ್ತೇನೆ. ಕಾರಖಾನೆಗಳು ಹೆಚ್ಚುತ್ತ ಬಂದಂತೆ ಹಳ್ಳಿಯ ಕೈಗಾರಿಕೆಗಳು ಮೂಲೆ ಪಾಲಾಗುತ್ತಿವೆ. ಹಳ್ಳಿಗಳೆಲ್ಲ ಕಾರಖಾನೆಗಳ ಹೊಟ್ಟೆ ತುಂಬುವ ಅಂಗಗಳಾಗುತ್ತಿವೆ. ಕಾರಖಾನೆಗಳ ಮಾಲಿಕರ ಕೈಗೊಂಬೆಗಳಾಗುತ್ತಿವೆ. ಅವುಗಳ ಸ್ವಾವಲಂಬನವು ಅಳಿದು ಪರಾವಲಂಬನವು ಆವರಿಸಿ ಬರುತ್ತಿದೆ. ನನಗೆ ಅಧಿಕಾರವಿರುತ್ತಿದ್ದರೆ ಈ ಕಾರಖಾನೆಗಳನ್ನೆಲ್ಲ ಮುಚ್ಚಿಸಿ ಬಿಡುತ್ತಿದ್ದೆ" ಎಂದು ಗರ್ಜಿಸಿದರು.

'ಸ್ವರಾಜ್ಯ' ಎಂದು ಹೇಳುತ್ತಿರುವಾಗ ಗಾಂಧಿಯವರ ಕಣ್ಣಮುಂದೆ ಸ್ವಾವಲಂಬಿ ಹಳ್ಳಿಯ ರೈತನ ಆ ಸರಳ ಜೀವನದ ಚಿತ್ರವು ಎದ್ದು ಬರುತ್ತಿತ್ತು; ಮರುಕ್ಷಣದಲ್ಲೆ ಅದನ್ನು ನಷ್ಟಪಡಿಸುತ್ತಿರುವ ಆ ದೈತ್ಯ ಯಂತ್ರಗಳ ದೈತ್ಯರೂಪವು ಕಟ್ಟಿಬರುತ್ತಿತ್ತು.

ಹಳ್ಳಿಯ ಆ ಶಾಂತ ಆವರಣ. ನಿರ್ಮಲವಾದ ಒಂದು ಚಿಕ್ಕ ಗುಡಿಸಲು. ಗದ್ದೆಯ ಬೇಸಾಯದಿಂದ ಬಿಡುಹೊಂದಿದ ರೈತನು ತನ್ನ ಹೆಂಡತಿ ಮಕ್ಕಳೊಂದಿಗೆ ಬಟ್ಟೆ ತಯಾರಿಸುವ ಉಪವೃತ್ತಿ ಕೈಕೊಂಡಿದ್ದಾನೆ. ಗೃಹಲಕ್ಷ್ಮಿ ತಾಯಿಯು ತಿರುಗುತ್ತಿರುವ ಚರಖಾದ ಶ್ರುತಿ ಹಿಡಿದು ಹಾಡುತ್ತಾ ನೂಲು ತೆಗೆಯುತ್ತಿದ್ದಾಳೆ. ಅಲ್ಲೇ ಸ್ವಲ್ಪ ದೂರದಲ್ಲಿ ಅವಳ ಹಾಡಿಗೆ ಸರಿಯಾಗಿ ತಾಳ ಹಾಕುತ್ತಿರುವವನಂತೆ 'ಲಟ್‌ಪಟ್, ಲಟ್‌ಪಟ್' ಎಂದು ಗೃಹಪತಿ ತಂದೆಯು ಕೈಮಗ್ಗದಲ್ಲಿ ಬಟ್ಟೆ ನೇಯುತ್ತಿದ್ದಾನೆ. ಮಗ್ಗದಲ್ಲೇ ಮನೆಯ ಅಜ್ಜ ಬಿಲ್ಲಿನಲ್ಲಿ ಹತ್ತಿ ಹಿಂಜುತ್ತಾ 'ಝುಂಯಿ ಝುಂಯಿ' ಸ್ವರ ಸೇರಿಸುತ್ತಿದ್ದಾಳೆ. ಚರಖಾ ಸಂಗೀತದಿಂದ ಇಂಪಾದ ಈ ಆವರಣದಲ್ಲಿ ಮನೆ ಮಕ್ಕಳು ಅಲ್ಲಿ ಇಲ್ಲಿ ಓಡುತ್ತಾ, ನಗುತ್ತಾ ಕುಣಿಯುತ್ತಿದ್ದಾರೆ. ಮುದ್ದಾದ

ಒಂದು ದನದ ಕರು ತಾಯಿಯ ಬೆನ್ನಹಿಂದೆ ನಿಂತು ಬೇಡವೆಂದರೂ ಕೇಳದೆ ತನ್ನ ಜೋಲು ಕಿವಿಯನ್ನು ಅಲ್ಲಾಡಿಸುತ್ತಾ ಸೆರಗು ಹಿಡಿದು ಎಳೆಯುತ್ತಿದೆ.

ಹೀಗೆ ತುಷ್ಟಿ-ಸಂತುಷ್ಟಿಯಿಂದ ಜೀವಿಸುತ್ತಿರುವ ಹಳ್ಳಿಯ ರೈತನ ಆ ಮನೋಹರ ಜೀವನ ಸಂಗೀತವನ್ನು ಒಮ್ಮೆಗೆ ತನ್ನ ಗಂಟಲಿನ ಕರ್ಕಶ ಅಟ್ಟಹಾಸದಿಂದ ಒತ್ತಿಬಿಟ್ಟು, ತನ್ನ ವಿರಾಧ ಬಾಹುಗಳಿಂದ ಆ ದೈವಿಕ ಚರಖಾ-ಕೈಮಗ್ಗಗಳನ್ನು ಅಮುಕಿ ಹಿಡಿದು, ಭಾರವಾದ ತನ್ನ ದೈತ್ಯಪಾದ ಗಳಿಂದ ತುಳಿದು ನೆಲಸಮ ಮಾಡುತ್ತಿರುವ ಗಿರಣಿ ಯಂತ್ರಗಳ ಆ ರಾಕ್ಷಸ ರೂಪವನ್ನು ಗಾಂಧಿಯವರಿಂದ ಸಹಿಸಲಾಗುತ್ತಿದ್ದಿಲ್ಲ. ಗಿರಣಿ ಯಂತ್ರಗಳು ಭೂಲೋಕಕ್ಕೆ ನರಕವನ್ನು ಇಳಿಸಿದ ಸಾಧನಗಳು" ಎಂದು ಜಿಗುಪ್ಸೆಗೊಂಡು ನುಡಿದು ಬಿಡುತ್ತಿದ್ದರು.

ಹೊಸ ಹೊಸ ಯಂತ್ರ ಸಾಧನಗಳನ್ನು ಕಂಡು ಹಿಡಿದು ಮನುಷ್ಯ ಸಮಾಜದ ಉನ್ನತಿಯಾಗುತ್ತಿದೆ ಎಂದು ನಾವು ಹಿಗ್ಗುತ್ತಿದ್ದೆವು. ಅವನತಿ ಯಾಗುತ್ತಿದೆ ಎಂದು ಗಾಂಧಿಯವರು ಮರುಗುತ್ತಿದ್ದರು. "ಯಂತ್ರ-ಸಾಧನ ಗಳು ತನ್ನ ಮಕ್ಕಳಿಗೆ ಬೇಡದವುಗಳು ಎಂದು ಪ್ರಕೃತಿ ಮಾತೆಯು ತನ್ನ ಗರ್ಭದಲ್ಲಿ ಬಚ್ಚಿಟ್ಟಿದ್ದಳು. ಆಶೆಯ ಬೆನ್ನು ಬಿದ್ದ ಬೆಸ್ತನು ಗಡಿಗೆಯ ಬಾಯಿ ತೆರೆದು ಭಯಂಕರ ಭೂತ ಒಂದನ್ನು ಹೊರಬಿಟ್ಟಂತೆ, ವಿಜ್ಞಾನಿಯು ಈ ಯಂತ್ರ-ಸಾಧನಗಳನ್ನು ಪ್ರಕೃತಿಯ ಹೊಟ್ಟೆಯಿಂದ ಕಾರಿಸಿದನು. ತನ್ನನ್ನು ಹೊರಬಿಟ್ಟ ಬೆಸ್ತನನ್ನೇ ಭೂತವು ನುಂಗಲು ಬಾಯಿ ತೆರೆದು ಬಂದಂತೆ ಈ ಹೊಸ ಹೊಸ ಯಂತ್ರಸಾಧನಗಳು ಮನುಷ್ಯ ಸಮಾಜವನ್ನು ನುಂಗಲು ಹೊರಟಿವೆ. ನುಂಗಲು ಬಂದ ಭೂತವನ್ನು ಪುನಃ ಗಡಿಗೆಯಲ್ಲಿ ಉಪಾಯ ದಿಂದ ಹೊಗಿಸಿ ಸಮುದ್ರಕ್ಕೆ ಎಸೆದುಬಿಟ್ಟ ಆ ಜಾಣ ಬೆಸ್ತನಂತೆ, ಈ ಯಂತ್ರ ಸಾಧನಗಳನ್ನೆಲ್ಲ ಒಂದು ಹಡಗಿನಲ್ಲಿ ತುಂಬಿ, ನಡು ಸಮುದ್ರದಲ್ಲಿ ಮುಳುಗಿಸಿ ಬಿಡುವ ಜಾಣತನ ಮನುಷ್ಯನು ತೋರಿಸದಿದ್ದರೆ ನಮಗೆ ಸುಖವಿರದು ಎಂದು ಗಾಂಧಿಯವರು ಹೇಳುತ್ತಿದ್ದರು.

ಆಸೆ-ಮಹಾಕಾಂಕ್ಷೆಗಳ ದಾಸನಾದ ಮನುಷ್ಯನು ಇಂದು ಯಂತ್ರ-

ಸಾಧನಗಳ ದಾಸನಾಗಿ, ಅವುಗಳ ಬೆನ್ನಹಿಂದೆ ಮತಿಗೆಟ್ಟು ಓಡುತ್ತಿದ್ದಾನೆ. ಭೂತಳದ ಆ ದೈವಿಕ ಶಾಂತಿಯನ್ನು ನಷ್ಟಪಡಿಸಿ ರಾಕ್ಷಸೀಯ ಚೀತ್ಕಾರದಿಂದ ಕರ್ಕಶಗೊಳಿಸುತ್ತಿದ್ದಾನೆ. ಅಬ್ಬಬ್ಬ! ಆ ಕಾರಖಾನೆಗಳ ಕೇಂದ್ರವೇ! ಗುಲ್ಲು ಗದ್ದಲಗಳ ಗೊಂದಲದಿಂದ ಹದಗೆಟ್ಟ ವಠಾರ. ಅಂದರೂಪವಿಲ್ಲದೆ ಉದ್ದಕ್ಕೆ ಚಾಚಿಕೊಂಡ ಆ ದೊಡ್ಡ ಕಟ್ಟಡ. ಅದರ ಹೊಟ್ಟೆಯೊಳಗಿನ ಹೊಲಸನ್ನು ಹೊರಗೆ ಕಾರಿಸಲಿಕ್ಕೆಂದು ಗಗನದ ಗರ್ಭದ ಒಳಗೆ ತೂರಿನಿಂತ ಆ ಗಂಟಲು ನಾಳ, ಹೊಗೆ ನಳಿಗೆ. ಅದರಿಂದ ಹೊರಬಿದ್ದ ಹೊಗೆಯ ಹೊಲಸಿನಿಂದ ಮಲಿನಗೊಂಡ ಆ ಸುತ್ತಲಿನ ಆಕಾಶ. ಹಾಯ್! ಆ ಸ್ವರ್ಗದಿಂದ ಇಳಿದು ಬರುವ ಪ್ರಕಾಶ-ಕಿರಣಗಳನ್ನು ಮಂದಗಟ್ಟಿಸಲು ಎದ್ದು ನಿಂತ ಈ ನರಕದ ಹೆಬ್ಬಾಗಿಲುಗಳೇ! ಒಳಹೊಕ್ಕು ನೋಡಿರಿ. ನಿಮ್ಮ ಹೇರಳ ವಸ್ತು-ಒಡವೆಗಳ ಸೃಷ್ಟಿ-ಕಾರ್ಯ ಸಾಗುತ್ತಿದೆ. ಭೂತಾಕಾರವಾಗಿ, ಚಕ್ರ ಚಕ್ರಗಳಾಗಿ, ಸುಳಿ ಸುಳಿಯಾಗಿ ಚಾಚಿನಿಂತ ಆ ಯಂತ್ರ ಸಾಧನಗಳು; ಅವುಗಳ ಎಡೆಯಲ್ಲಿ ಸಿಲುಕಿಕೊಂಡು, ತಾವೂ ಯಂತ್ರದ ಒಂದೊಂದು ತುಂಡುಗಳಾಗಿ, ಬೆವರು ಸುರಿಸುತ್ತಿರುವ ಆ ನಿರ್ಜೀವ ನರ–ಪ್ರೇತಗಳು. ಅಮಮ! ಭಯಂಕರ ಗತಿಯಿಂದ ತಮ್ಮ ಕೋರೇಹಲ್ಲುಗಳನ್ನು ತೋರಿಕೊಂಡು ಗರಗರನೆ ತಿರುಗುತ್ತಿರುವ ಆ ಚಕ್ರಗಳೇ! ಒಂದೇ ಸವನೆ ನರಕದ ನಿರ್ಮಾಣದಲ್ಲಿ ತೊಡಗಿರುವಂತೆ ತೋರುತ್ತಿವೆ! ಪಾಪದ ಬಡಕೂಲಿಗಾರ ತನ್ನ ಏಳಿಗೆಯ ಆಶೆ-ಉತ್ಸಾಹಗಳನ್ನು ಹೊತ್ತುಕೊಂಡು ಬಂದವ, ಈ ಯಂತ್ರಗಳ ದವಡೆಗಳಲ್ಲಿ ಸಿಲುಕಿ, ಮನುಷ್ಯತ್ವವನ್ನೇ ಕಳಕೊಂಡ ನಿರ್ಜೀವ ಪ್ರೇತವಾಗುತ್ತಿದ್ದಾನೆ! ಇಲ್ಲವೆ ಕಲ್ಲು ಮನಸ್ಸಿನ ಕಣ್ಣಿನಲ್ಲಿ ರಕ್ತವಿಲ್ಲದ ಯಮದೂತನಾಗುತಿದ್ದಾನೆ.

ಹೀಗೆ ಸಂಪತ್-ಸಮೃದ್ಧಿಯ ಹೆಸರಿನಲ್ಲಿ ಹೃದಯದ ಮೃದುಭಾವಗಳನ್ನೆಲ್ಲ ಇಂಗಿಸಿ ಮನುಷ್ಯತ್ವದ ಕೊಲೆಗೈಯಲು ಹೊರಟ ಯಂತ್ರದ ಪುರಸ್ಕರ್ತರು-ಎನ್ನುವವರನ್ನು ಕರೆದು ಗಾಂಧಿಯವರು ಕೇಳಿದರು, “ಈ ಮಹಾ ಯಂತ್ರಗಳ ಪ್ರತಿಷ್ಠಾಪನೆಮಾಡಿ ಏನು ಪರಬ್ರಹ್ಮ ಈ ಭೂಮಂಡಲದಲ್ಲಿ ಸಾಧಿಸುತ್ತೇವೆ? ಹೇರಳ ವಸ್ತು-ಒಡವೆಗಳನ್ನು ಅಂದರೆ ಅವುಗಳ ವ್ಯಾಪಾರಕ್ಕಾಗಿ ಮೇಲಾಟವನ್ನು; ಆಗ ಬೆನ್ನು ಹಿಡಿದು ಬರುವ ಅಸೂಯೆ-ಮತ್ಸರಗಳ

ನ್ನು ನಿಮ್ಮ ಈ ಹೇರಳ ವಸ್ತು-ಒಡವೆಗಳು ನಿಮ್ಮ ದೇಶದಲ್ಲಿ ಮಾರಿ ಹೋಗ ದಿದ್ದರೆ ಏನು ಮಾಡುತ್ತೀರಿ? ಪರದೇಶಗಳಿಗೆ ಕಳುಹಿಸುತ್ತೀರಿ. ಆ ಪರದೇಶ ದವರು ನಿಮ್ಮ ಸಾಮಾನುಗಳನ್ನು ಕೊಂಡುಕೊಳ್ಳದೆ ಹೋದರೆ? ಕಾಲು ಹಿಡಿದು ಕೊಂಡುಕೊಳ್ಳಿರಿ ಎಂದು ಬೇಡುತ್ತೀರಿ. ಕೊನೆಗೆ ಕೊಂಡು ಕೊಳ್ಳುವಂತೆ ಅವರನ್ನು ಬಲಾತ್ಕರಿಸುತ್ತೀರಿ. ಯುದ್ಧ ಸಾರುತ್ತೀರಿ. ಯುದ್ಧ ಹೂಡಿ ಅವರನ್ನು ನಿಮ್ಮ ಅಂಕೆಯಲ್ಲಿರಿಸಿ, ನಿಮ್ಮ ಮಾಲನ್ನು ಅವರ ಗಂಟ ಲಿಗೆ ತುರುಕುತ್ತೀರಿ. ಇದು ನಿಮ್ಮ ಹೇರಳ ವಸ್ತು-ಒಡವೆಗಳು ಎಂಬ ರೀತಿಯ ಒಂದು ಗುರಿ.

‘‘ಅದಲ್ಲದಿದ್ದರೆ ಕಾರಖಾನೆ ಮುಚ್ಚಿಬಿಟ್ಟು ಕೆಲಸಗಾರರನ್ನು ‘ನಡೆ ಯಿರಿ ಹೊರಗೆ’ ಎಂದು ಕಟ್ಟಪ್ಪಣೆ ಕೊಡುತ್ತೀರಿ. ‘‘ಕೆಲಸ-ಕೆಲಸ, ಅನ್ನ-ಅನ್ನ’’ ಎಂದು ಕೂಗಿಕೊಂಡು ನಿಮ್ಮ ಕೆಲಸಗಾರರು ಮುತ್ತಿಬಂದರೆ, ಕೋವಿ ಬಂದೂಕುಗಳಿಂದ ಹೊಡೆದು, ಬಾಯಿ ಮುಚ್ಚಿಸುತ್ತೀರಿ. ಮೊದಲೇ ಉದ್ಯೋಗ ಸಾಕಷ್ಟು ಇಲ್ಲದೆ ಹದಗೆಟ್ಟ ಸಮಾಜದಲ್ಲಿ ನಿರುದ್ಯೋಗಿಗಳ ಈ ಹೊಸ ಪಡೆಯನ್ನು ಹೊರಬಿಟ್ಟು ರಕ್ತ-ಕ್ರಾಂತಿಯ ಕೋಲಾಹಲವೆಬ್ಬಿಸು ತ್ತೀರಿ.

‘‘ಹೀಗೆ ಮುಂದರಿದರೆ ಪರಕೀಯರ ತಲೆ ಹಿಂಜರಿದರೆ ಸ್ವಕೀಯರ ತಲೆ! ಇದಿಷ್ಟೂ ಅಮಾನುಷ ಹಿಂಸೆ ‘‘ಹೇರಳ ವಸ್ತು-ಒಡವೆಗಳು’’ ಎಂಬ ಒಂದು ದುಷ್ಟ ಹುಚ್ಚಿಗಾಗಿ! ಹರೇರಾಮ್! ಹಿಂಸೆ-ಅಸೂಯೆಗಳಿಂದ ಆರಕ್ತ ಗೊಂಡು, ಕಣ್ಣುಕಟ್ಟಿ ದಾರಿ ಕಾಣದೆ ತೊಳಲುತ್ತಿರುವ ನಮ್ಮ ಜನರಿಗೆ ಸರಿದಾರಿ ತೋರು” ಎಂದು ಧ್ಯಾನಸ್ಥರಾದ ಗಾಂಧಿಯವರ ಕಣ್ಣುಗಳಿಂದ ಒಂದೆರಡು ಕಣ್ಣೀರ ಬಿಂದುಗಳು ಉರುಳಿ ಬಂದುವು.

ಅವರ ಮಾತುಗಳನ್ನು ಆಲಿಸುತ್ತಿದ್ದ ನಾವು ಸಹ ಅವರೊಂದಿಗೆ ‘‘ಹರೇ ರಾಮ್! ಸರಿದಾರಿ ತೋರು’’ ಎಂದು ಪ್ರಾರ್ಥಿಸಿದೆವು. ದೂರದ ಕಿರಣ ಒಂದು ಹೃದಯದೊಳಗೆ ಹರಿದು ಬಂದಂತಿತ್ತು ನಮ್ಮ ಸ್ಥಿತಿ. ಬಿರು ಗಾಳಿ ಎದ್ದು ಶಾಂತಗೊಂಡಂತ್ತಿತ್ತು ಸುತ್ತಲಿನ ಪ್ರಕೃತಿ.

ಮುಖವೆತ್ತಿ ನಮ್ಮನ್ನು ದಿಟ್ಟಿಸಿ ನೋಡಿದ ಮಹಾತ್ಮರು ಚರಖಾದ ರಹಸ್ಯ ವಿವರಿಸ ತೊಡಗಿದರು. ಪ್ರಕಾಶಗೊಂಡಿತ್ತು ಅವರ ಮುಖವು. ಗಂಭೀರವಾಗಿತ್ತು ಅವರ ಕಂಠವು. ಭಾರಗೊಂಡಿದ್ದ ಅವರ ಮಾತುಗಳು ಒಂದೊಂದಾಗಿ ಹೊರ ಉರುಳ ತೊಡಗಿದುವು. "ದಾಸ್ಯ-ಸುಲಿಗೆಗಳಿಗೆ ಎಡೆಕೊಡದ, ಆಶೆ-ಅಸೂಯೆಗಳನ್ನು ಉದ್ರೇಕಿಸದ ಒಂದು ಜೀವನಕ್ರಮವು ನಮಗೆ ಬೇಕು." "ಬೇಕು, ಬೇಕು" ಎಂದು ಬಡಿದುಕೊಂಡಿತು ನಮ್ಮ ಹೃದಯವು. "ಹಾಗಿದ್ದರೆ ಹೇರಳ ವಸ್ತು-ಒಡವೆಗಳು ಎಂಬ ಆದರ್ಶದ ಬೆನ್ನು ಬಿಟ್ಟು ಬಿಡಿರಿ. ನಿಮ್ಮ ನಿಮ್ಮ ಹಳ್ಳಿಯ ಪೂರೈಕೆಯಷ್ಟಕ್ಕೆ ನಿಮ್ಮ ಅವಶ್ಯಕತೆಗಳನ್ನು ತಡೆದು ನಿಲ್ಲಿಸಿರಿ" ಎಂದು ನಮ್ಮ ಕಡೆಗೆ ಬೊಟ್ಟುಮಾಡಿ ನೇರಾಗಿ ದಿಟ್ಟಿಸಿ ನೋಡಿದರು. ಅವರ ಆ ನೇರ ನೋಟವು 'ಸರಕ್' ಎಂದು ನಮ್ಮ ಹೃದಯವನ್ನು ಹೊಕ್ಕಿತು. ತಲೆತಗ್ಗಿಸಿ ಮುದುಡಿ ಮೂಲೆ ಸೇರಿದ ನಮ್ಮ ಆಶೆಯು ಥರಥರನೆ ನಡುಗುತ್ತಾ 'ಕೊನೆಯ ಪ್ರಯತ್ನ' ಎಂದು ತಲೆ ಎತ್ತಿ ಚೀತ್ಕರಿಸತೊಡಗಿತು: "ಹಳ್ಳಿಯ ಪೂರೈಕೆಯಷ್ಟಕ್ಕೆ ಜೀವನ ನಿರ್ವಾಹ? ಪೆನ್? ಫೌಂಟನ್ ಪೆನ್ ಬೇಡವೆ?" ಒಮ್ಮಿಂದೊಮ್ಮೆಗೆ ಒನಕೆಯ ಗಾತ್ರಕ್ಕೆ ಬೆಳೆದ ಫೌಂಟನ್ ಪೆನ್ ಕಣ್ಣ ಮುಂದೆ ಮೇಲೆ-ಕೆಳಗೆ ನೆಗೆಯ ತೊಡಗಿತು. ಆದರೆ ಗಾಂಧಿಯವರ ಆ ನೋಟವು ಇನ್ನೂ ಹಾಗೆಯೇ ನೆಟ್ಟಿತ್ತು. ಒನಕೆಯ ಗಾತ್ರಕ್ಕೆ ಬೆಳೆದಿದ್ದ ಪೆನ್ ಸಪುರವಾಗುತ್ತಾ ಕಡ್ಡಿಯಾಗಿ ಕಣ್ಮರೆಯಾಯಿತು. ಸೈಕಲ್, ಮೋಟರ್ ಕಾರ್, ರೇಡಿಯೊ, ಎಂದು ಮೊದಲಾಗಿ ನಮ್ಮ ಆಶೆಗಳೆಲ್ಲ ಒಂದೊಂದಾಗಿ ಮೇಲೆದ್ದು ಬಂದು ಕೆಳಗುರುಳತೊಡಗಿದುವು. ಆಶೆಯ ಆವೇಗಕ್ಕೆ ಸಿಲುಕಿದ ಹೃದಯವು ಶಾಂತಗೊಂಡಿತು. ಹಳ್ಳಿಯ ಪೂರೈಕೆಯಷ್ಟಕ್ಕೆ ಜೀವನ ನಿರ್ವಾಹವು ಸಾಧ್ಯವೆಂದು ತೋರಿತು. ಕತ್ತಲು ಸರಿದು ಅರುಣೋದಯವಾದಂತಿತ್ತು. ಮುಂದರಿದು ಗಾಂಧಿಯವರು, "ಹಳ್ಳಿಯ ಪೂರೈಕೆಯಷ್ಟಕ್ಕೆ ಜೀವನ ನಿರ್ವಹಿಸುವ ಈ ಸರಳ ಜೀವನ ಕ್ರಮಕ್ಕೆ **"ಸ್ವಾವಲಂಬನ, ಸ್ವರಾಜ್ಯ" ಎಂದು ಹೇಳುತ್ತೇನೆ.** ಈ ಜೀವನದ **ಹೆಗ್ಗುರುತೇ ನನ್ನ ಚರಖಾ"** ಎಂದು ವಿಜಯ ಸೂಚಕ ಮುಗುಳು ನಗು ತೋರಿದರು.

ಇಂದಿನ ಈ ಯಂತ್ರಯುಗದಲ್ಲಿ ಗಾಂಧಿಯವರ ಈ ಚರಖಾ ಜೀವನವನ್ನು ನೋಡ ಬಯಸುವವರು ಅವರ ಸೇವಾ ಗ್ರಾಮಕ್ಕೆ ಹೋಗಬೇಕು. ಅದು ವಾರ್ಧಾ ರೈಲು ಸ್ಟೇಷನಿನಿಂದ ಐದು ಮೈಲು ದೂರದಲ್ಲಿರುವ ಒಂದು ಬರಡು ಹಳ್ಳಿ. ನಾಲ್ಕಾರು ಸಣ್ಣ ಗುಡಿಸಲುಗಳನ್ನು ಕಟ್ಟಿಕೊಂಡು ನಮ್ಮ ಮಹಾತ್ಮರು ಆಶ್ರಮ ಮಾಡಿದ್ದರು. ಆಶ್ರಮ ವಾಸಿಗಳೇ ಹಳ್ಳಿಯ ರೈತರೊಂದಿಗೆ ಸೇರಿ ಕಟ್ಟಿಕೊಂಡ ಗುಡಿಸಲುಗಳು ಅವು. ಮಣ್ಣಿನದೇ ಗೋಡೆ. ನೆಲದ ಸಾರಣೆಯೂ ಮಣ್ಣಿನದೇ. ಹಂಚಿನ ಛಾವಣಿ: ಆದರೆ ಕಾರಖಾನೆ ಹಂಚುಗಳಲ್ಲ. ಆ ಊರಿನ ಕುಂಬಾರನು ತಯಾರು ಮಾಡಿದ ಹಂಚು. ಬಿದಿರಿನ ಬಾಗಿಲು ಮತ್ತು ಕಿಟಿಕಿಗಳು. ಆಶ್ರಮದ ಗುಡಿಸಲುಗಳನ್ನೆಲ್ಲಾ ಸುಳಿದು ಬಂದರೂ ಒಂದು ಕುರ್ಚಿ ಅಥವಾ ಮೇಜು ದೊರೆಯಲಿಕ್ಕಿಲ್ಲ. ಈಚಲು ಮರದ ಓಲೆಯಿಂದ ಹೆಣೆದ ಚಾಪೆಗಳು. ಈ ಚಾಪೆಯ ಮೇಲೆ ಕುಳಿತು ಮರದ ಒಂದು ಹಲಿಗೆಗೆ ಒರಗಿಕೊಂಡು ಲೋಕದ ಕಾರಭಾರವನ್ನು ನಮ್ಮ ಮಹಾತ್ಮರು ನಡೆಯಿಸಿದರು. ಅವರು ಬರೆಯುತ್ತಿದ್ದ ಬರಹ-ಲೇಖನಗಳಿಗೆ ಎಣಿಕೆ ಇಲ್ಲ. ಆದರೂ ಕೇವಲ ಹೇಂಡ್ಲು-ಮೊನೆಯಿಂದಲೇ ತಮ್ಮ ಬರವಣಿಗೆಯನ್ನು ಸಾಗಿಸಿದರು.

ಇದು ಸರಳ ಜೀವನದ ಆದರ್ಶದ ಅಡಿಗಲ್ಲ ಮೇಲೆ ರೂಪಿಸಿದ ಆಶ್ರಮವು. ಮೋಟರ್ ಬೇಡ, ಎತ್ತಿನಗಾಡಿ ಸಾಕು. ಕಲ್ಲು-ಸಿಮೆಂಟಿನ ಗೋಡೆ-ಗಾರೆ ಬೇಡ, ಮಣ್ಣು-ಸುಣ್ಣದ ಸಾರಣೆ ಸಾಕು. **ಸ್ವದೇಶಿಯ ಪರಿಪೂರ್ಣತೆ ಇದು.** ಹಳ್ಳಿಯ ಪ್ರತಿ ಒಬ್ಬನೂ ಒಂದಲ್ಲ ಒಂದು ಉದ್ಯೋಗದಲ್ಲಿ ತನ್ನನ್ನು ತಾನು ಹೊಂದಿಸಿಕೊಳ್ಳುತ್ತಾನೆ. ಪರಸ್ಪರ ಹೊಂದಿಕೊಂಡು ಪ್ರೀತಿ-ಸಹಕಾರದ ಜೀವನ ನಡೆಯಿಸುತ್ತಾನೆ. ಆಳರಸರ ಗೊಡವೆ ಹಚ್ಚಿಕೊಳ್ಳದೆ ಸ್ವಕಾರ್ಯ ನಿರತನಾಗುತ್ತಾನೆ. **ಸ್ವಾವಲಂಬನದ ಪರಿಪೂರ್ಣತೆ ಇದು.** ಇಂಥ ಸರಳ ಮತ್ತು ನಿರ್ಮಲ ವಾತಾವರಣದಲ್ಲಿ ವಿಚಾರ-ಬುದ್ಧಿಯು ಮೊನೆಗೊಂಡು ವಿಷಯದ ಅಂತರಾಳವನ್ನು ಮುಟ್ಟುತ್ತದೆ. ಹೊಸ ಹೊಸ ಭಾವಗಳು ರೆಕ್ಕೆ ಪಡೆದು ಆಕಾಶದ ಕೊನೆ ಏರುತ್ತವೆ. 'ನನ್ನದು' ಎಂಬ ಮಮತೆಯು ಸ್ವ-ಕುಟುಂಬದ ಪರಿಧಿ ಮೀರಿ, ಮಾನವರನ್ನೆಲ್ಲಾ

ತನ್ನವರನ್ನಾಗಿ ತಿಳಿದು, ಮೃಗ–ಪಕ್ಷಿಗಳ ಬಾಂಧವ್ಯವನ್ನು ಸಹ ಕೋರುತ್ತದೆ. ಕಣ್ಣಿಗೆ ಕಾಣದ ವಿಶ್ವದೊಂದಿಗೆ ಸಹ ಸೌಹಾರ್ದತೆ, ಜೋಡಿಸುವ ಔದಾರ್ಯವು ಬೆಳೆದುಬರುತ್ತದೆ. **ಉಚ್ಚ ವಿಚಾರದ ಪರಮಾವಧಿ** ಇದು.

ಈ 'ಸರಳಜೀವನ, ಉಚ್ಚವಿಚಾರ'ದ ಧ್ಯೇಯವೆಲ್ಲಿ? ಆ ಲಾಭ ಒಡಕತನ ಗೊಂದಲದ ಧ್ಯೇಯವೆಲ್ಲಿ? ಒಂದು ನಿಮ್ಮನ್ನು ಅಹಿಂಸೆ-ಸತ್ಯದ ಕಡೆಗೆ ಮೇಲೆ ಮೇಲೆ ಎತ್ತಿಕೊಂಡು ಹೋಗುತ್ತಿದ್ದರೆ, ಇನ್ನೊಂದು ಹಿಂಸೆ-ಅಸತ್ಯದ ಕಡೆಗೆ ದಬ್ಬಿಕೊಂಡು ಕೆಳಕೆಳಗೆ ಉರುಳಿಸುತ್ತಿದೆ. ಇದನ್ನು ಪರಿಪೂರ್ಣವಾಗಿ ವಿವೇಚಿಸಿ ತಿಳಿದ ಗಾಂಧಿಯವರು ನಮಗೆ ಬೇಕಾದುದು ಆ **"ಶುಭ ಚರಖಾ"** ಎಂದು ಸಾರಿದರು.

ಸಂಪತ್ತು-ಸಮೃದ್ಧಿ ಎಂದು ಗೊತ್ತು ಗುರಿ ಇಲ್ಲದೆ ಸ್ವೈರಣೆಗೆಟ್ಟು ಓಡುತ್ತಿರುವ ಲೋಕವನ್ನು ತಡೆದು, "ಜೀವನದ ಲಕ್ಷ್ಯವೇನು?" ಎಂದು ಗಾಂಧಿಯವರು ಕೇಳಿದರು. "ಗುಡಿಸಲಿನಿಂದ ಮಹಲಿನ ಕಡೆಗೆ, ಅಥವಾ ಕಾಲ್ನಡೆಯಿಂದ ಹಾರುತ್ತಿರುವ ವಿಮಾನದ ಕಡೆಗೆ, ಅಥವಾ ದೈಹಿಕ ದುಡಿಮೆಯಿಂದ ವಿಶ್ರಾಂತಿ-ವಿಲಾಸದ ಕಡೆಗೆ" ಎಂದೇ? ಅಲ್ಲ, ಸರ್ವಥಾ ಅಲ್ಲ. ಜೀವನದ ಲಕ್ಷ್ಯ: **ಸತ್ಯದ ಶೋಧನೆ. ಈ ಸತ್ಯದ ಶೋಧನೆಯ ರೀತಿ ಅಹಿಂಸೆ. ಈ ಅಹಿಂಸೆ ಮತ್ತು ಸತ್ಯದ ಸಾಧನೆಗೆ ಬೇಕಾದುದು, ಹಳ್ಳಿಯ ಆ ಚರ್ಖಾ ರೀತಿಯು ಸರಳ ಜೀವನ.**

ಶರೀರವೆತ್ತಿ ಬಂದ ಜೀವನದ ಹೊಸ ರೂಪವಿದು. ಶಿರಸ್ಸಿನಂತೆ ವಿರಾಜಿಸುತ್ತಿದೆ, ಆ ಸತ್ಯ-ಲಕ್ಷ್ಯ. ಹೃದಯದಂತೆ ಮಿಡಿಯುತ್ತಿದೆ, ಆ ಅಹಿಂಸಾರೀತಿ. ಕೈಕಾಲುಗಳಂತೆ ಆಧರಿಸುತ್ತಿದೆ, ಈ ಚರ್ಖಾ ರೀತಿ.

"ಮಸೆ, ಮಸೆ, ಕೊಡಲಿ ಮಸೆ" ಎಂಬಂತಿದೆ ಲೋಕದ ರೀತಿ. ಈ ಹಿಂಸಾರುಣ ಲೋಕದ ಮುಂದೆ **ಶಾಂತರೂಪಿ ಗಾಂಧಿ ಮಹಾತ್ಮರು ಅವತಾರವೆತ್ತ ಶಾಂತಿ-ದೇವರಾಗಿ, ತಮ್ಮ ಅಮೃತ ಹಸ್ತವನ್ನೆತ್ತಿ, ಶಾಂತಿಪಾಠ ಹೇಳುತ್ತಿದ್ದಾರೆ.**

ಓಂ ಶಾಂತಿಃ ಶಾಂತಿಃ ಶಾಂತಿಃ

ಗಾಂಧಿಯವರ ಕೆಲವು ವಿಶಿಷ್ಟ ರೀತಿಗಳು.

ಆಕಾಶವನ್ನೇರಿ ನಿಂತ ಗಾಂಧಿಯವರ ಆದರ್ಶ ರೀತಿಗಳು ಏನು ಎಂದು ನಾವು ವಿಚಾರಿಸಿದೆವು. ಆಶ್ರಮದ ಪಿತನಾಗಿ ನಿರ್ವಹಿಸುತ್ತಿರುವ ಅವರ ಕೆಲವು ವಿಶಿಷ್ಟ ರೀತಿಗಳು ಏನು ಎಂದು ಈಗ ವಿಚಾರಿಸುವ.

1. ನೆಹರೂ ಮತ್ತು ಗಫರ್ ಖಾನರು ಏನೋ ಗಹನ ವಿಷಯದ ಚರ್ಚೆಗೆಂದು ಬಂದಿದ್ದರು. ಗಾಂಧಿಯವರು ಆಶ್ರಮದ ಹುಡುಗನೊಬ್ಬನ ದುಃಸ್ವಪ್ನದ ವಿಶ್ಲೇಷಣೆಯಲ್ಲಿ ತಲ್ಲೀನರಾಗಿ ಹೋಗಿದ್ದರು. ಈ ವಿಶ್ಲೇಷಣೆ ಹೇಗೂ ಕೊನೆಗೊಂಡಿತು ಎನ್ನುವಷ್ಟರಲ್ಲಿ ಅಂದು ಮಧ್ಯಾಹ್ನದ ಮೇಲೋಗರದ ಭಾರಿ ಪ್ರಶ್ನೆ ಮುಂದೆ ಬಂತು. ಅದರ ರಸವು ಎಷ್ಟು ದಪ್ಪನಾಗಿರಬೇಕು ಎಂಬ ವಿಷಯದಲ್ಲಿ ಮತಭೇದವೆದ್ದಿತ್ತು. ಉತ್ತಮ ರಸವು ಎಷ್ಟು ದಪ್ಪವಿರಬೇಕು ಎಂದು ಗಾಂಧಿಯವರು ವಿವರಿಸಿದರು. ಸಣ್ಣ ವಿಷಯಗಳಲ್ಲಿ ಹೀಗೆ ವೇಳೆ ಕಳೆಯುತ್ತಿರುವ ಮಹಾತ್ಮರ ಈ ರೀತಿ ನೋಡಿ ನೆಹರೂರ ಹುಬ್ಬುಗಳು ಗಂಟಿಕ್ಕಿ ಬರುತ್ತಿದ್ದುವು. ಗಫರ್ ಖಾನರ ಮುಖದ ಮೇಲೆ ನಗು ಉಕ್ಕಿ ಬರುತ್ತಿತ್ತು.

2. ಏನೋ ರಾಜಕೀಯ ವಿಷಯದಲ್ಲಿ ಆಗಿಂದಾಗಲೇ ನಿರ್ಧಾರಕ್ಕೆ ಬರಬೇಕಿತ್ತು. ವಿಚಾರ-ವಿನಿಮಯಕ್ಕೆಂದು ಮುಂದಾಳು ಒಬ್ಬರನ್ನು ಕಾರ್ಯದರ್ಶಿ ದೇಸಾಯಿ ಭಾಯಿಯವರು ಎಕ್ಸ್‌ಪ್ರೆಸ್ ತಂತಿ ಕಳುಹಿ ನೂರಾರು ಮೈಲುಗಳ ದೂರದಿಂದ ಬರಮಾಡಿದ್ದರು. ದರ್ಶನಕ್ಕಾಗಿ ಆತುರಪಡುತ್ತಿದ್ದ ಅವರು ಕಾಯುತ್ತಾ ಇದ್ದಂತೆಯೇ, ನಮ್ಮ ಮಹಾತ್ಮರು ಹುಡುಗನೊಬ್ಬನನ್ನು ಮುಂದೆ ನಿಲ್ಲಿಸಿಕೊಂಡು "ಇನ್ನು ಮುಂದೆ ತಂಬಿಗೆ ತುಂಬಾ ನೀರು ಚೆಲ್ಲಿ ಚೆಲ್ಲಿ ಕಾಲು ತೊಳೆದರೆ, ಎಚ್ಚರಿಕೆ" ಎಂದು ಮೂಗಿನ ಮೇಲೆ ಬೆರಳಿಟ್ಟು ಗದರಿಸುತ್ತಿದ್ದರು. ಸ್ನಾನಕ್ಕೆ ಎಷ್ಟು, ಕಾಲು ತೊಳೆಯಲಿಕ್ಕೆ

ಎಷ್ಟು ಎಂದು ಮೊದಲಾಗಿ ನೀರಿನ ಪ್ರಮಾಣ, ತೂಕದ ವಿವರಣೆ ಕೊಡುತ್ತಾ ಕೆಲವು ಕಾಲ ಕಳೆದರು.

ಅನಂತರ ಆಗಮಿಸಿದ ಮುಂದಾಳುಗಳೊಂದಿಗೆ ಗಹನ ವಿಷಯದ ವಿಮರ್ಶೆಗೆ ತೊಡಗಿದರು. ಅಷ್ಟರಲ್ಲಿ ಆಶ್ರಮದ ರೋಗಿಯೊಬ್ಬನಿಗೆ 'ಎನಿಮಾ' ಕೊಡುವ ನಿಶ್ಚಿತ ಸಮಯ ಬಂದು ಬಿಟ್ಟಿತು.

ದೇಶದ ರಾಜಕಾರಣವಾದರೂ ಕೆಲವು ನಿಮಿಷಗಳ ವರೆಗೆ ತಡೆಯ ಬಲ್ಲುದು. 'ಎನಿಮಾ' ಕೊಡುವುದನ್ನು ಒಂದೆರಡು ನಿಮಿಷಗಳು ಸಹ ತಡೆ ಯಲು ಬರುವುದೇ? "ಬರುತ್ತೇನೆ, ತಡೆಯಿರಿ" ಎಂದು ಗಾಂಧಿಯವರು ನಡೆದೇ ಬಿಟ್ಟರು.

ಗಾಂಧಿಯವರ ಇಂತಹ ರೀತಿ ನೋಡಿ ಎಡ್ವರ್ಡ್ ಥೋಮ್ಸನ್ ಎಂಬ ಆಂಗ್ಲ ಮಿತ್ರರು "ತಲೆನೋವು ಬರಿಸುವ ಮಹಾತ್ಮರು ನೀವು"ಎಂದು ಆಗಾಗ ಮೂದಲಿಸುತ್ತಿದ್ದರು.

3. ಘನಶ್ಯಾಮದಾಸ ಬಿರ್ಲಾರು, ನಮ್ಮ ದೇಶದ ಲಕ್ಷಾಧಿಪತಿಗಳು; ಗಾಂಧಿಯವರ ಆಪ್ತಮಿತ್ರರು. ಒಂದುದಿನ ಅಪರಾಹ್ನ ಮೂರು ಘಂಟೆಗೆ ಅವರು ಗಾಂಧಿಯವರ ಸಂದರ್ಶನಕ್ಕೆ ಬಂದರು. ಗಾಂಧಿಯವರು ತಮ್ಮ ಮುಂದೆ ಕಸ್ತೂರಿಬಾಅವರ ಕೆಲವು ಹಳೆಯಹರಕು ಸೀರೆಗಳನ್ನು ಮತ್ತು ಆಶ್ರ ಮದ ಹಳೆಯ ಪೇಪರುಗಳನ್ನು ಹರಡಿಕೊಂಡು ಕುಳಿತಿದ್ದರು. ಮೊಳ ಹಾಕಿ ಅಳೆಯುತ್ತಾ, ಎಣಿಕೆ ಹಾಕಿ ಗುಣಿಸುತ್ತಾ ಇದ್ದ ಮಹಾತ್ಮರನ್ನು ನೋಡಿ, "ಏನು ಇದು ಮಹಾಯೋಜನೆ?" ಎಂದು ವಿಚಾರಿಸಿದರು. "ಆಶ್ರಮದ ರೋಗಿಯೊಬ್ಬನಿಗೆ ಹೊದ್ದುಕೊಳ್ಳಲು ಒಂದು ರಜಾಯಿಯ ತಯಾರಿ" ಎಂದು ಉತ್ತರ ಬಂತು. ಈ ಸಣ್ಣ ಸಣ್ಣ ವಿಷಯಗಳಿಗೆ ಮಹಾತ್ಮರಾದ ತಾವು ಹೀಗೆ ಗೊಂದಲ ಹಚ್ಚಿಕೊಳ್ಳುವುದೇಕೆ?" ಎಂದು ಬೆರಗುಗೊಂಡ ಅವರು ಪ್ರಶ್ನಿಸಿದರು.

ಗಾಂಧಿಯವರ ಉತ್ತರವು ಇನ್ನೂ ಬೆರಗುಗೊಳಿಸಿತು. "ನನಗೂ

ಒಂದು ಕುಟುಂಬ ಇದೆ ಬಿರ್ಲಾಭಾಯಿ. ಅದರ ಯೋಗಕ್ಷೇಮವನ್ನು ವಿಚಾರಿಸುವ ಕೌಟುಂಬಿಕ ಆಶೆಯೂ ನನ್ನಲ್ಲಿ ಇದೆ'' ಎಂದು ತಮ್ಮ ಪಿತೃ ವಾತ್ಸಲ್ಯದ ಪರಿಚಯ ಕೊಟ್ಟರು.

ಗಾಂಧಿಯವರ ಆಶ್ರಮದಲ್ಲಿ ಹಲವು ರೋಗಿಗಳು ಆಶ್ರಯ ಹೊಂದಿದ್ದರು. ಗಾಂಧಿಯವರೇ ಸ್ವತಹ ಆರೈಕೆ ಮಾಡುತ್ತಿದ್ದರು. ಗಾಂಧಿಯವರಿಗಿರುವುದು ಒಂದೇ ಕೋಣೆ. ಪ್ರತಿನಿತ್ಯ ಹನ್ನೊಂದು ಘಂಟೆಗೆ ಈ ಕೋಣೆಯು ರೋಗಿಗಳ ಭೋಜನ ಶಾಲೆಯಾಗುತ್ತಿತ್ತು. ತಮ್ಮ ಇದಿರಿನಲ್ಲೇ ಅವರನ್ನು ಕೂತುಕೊಳ್ಳಿಸಿ ಊಟಮಾಡಿಸುತ್ತಿದ್ದರು. ಆ ರೋಗಿಗಳು ಏನು ಪುಣ್ಯಮಾಡಿ ರೋಗ ಪಡೆದುಕೊಂಡರೋ!

4. ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯು ಆಶ್ರಮದಲ್ಲಿ ನೆರೆದಿತ್ತು. ಪಟೇಲ, ನೆಹರೂ ಮೊದಲಾದ ದೊಡ್ಡ ದೊಡ್ಡ ರಾಜಕಾರಣಪಟುಗಳು ಗಾಂಧಿಯವರೊಂದಿಗೆ ದೇಶದ ಭವಿಷ್ಯತ್ತನ್ನು ನಿರ್ಣಯಿಸುವ ವಿಚಾರದಲ್ಲಿ ತೊಡಗಿದ್ದರು.

ಅಷ್ಟರಲ್ಲಿ ಬನ್ಸಾಲಿ ಎಂಬ ಆಶ್ರಮವಾಸಿಯೊಬ್ಬರು ಅವಸರವಸರವಾಗಿ ನುಗ್ಗಿ ಬಂದರು. ಗಾಂಧಿಯವರ ಮುಂದೆ ಕೈಮುಗಿದು ನಿಂತು ''ಬಾಪೂಜೀ, ಐದು ವರ್ಷಗಳ ಹಿಂದೆ ನುಡಿದ ಒಂದು ಸುಳ್ಳು ಮಾತು ಈಗ ನೆನಪಿಗೆ ಬಂತು. ಪಶ್ಚಾತ್ತಾಪದಿಂದ ಕೊರಗುತ್ತಿದ್ದೇನೆ. ಪ್ರಾಯಶ್ಚಿತ್ತವಾಗಿ ನಮ್ಮ ಬಾವಿಯ ಮೇಲೆ ತಲೆ ಕೆಳಗೆ ಮಾಡಿ ಐದು ಘಂಟೆಯ ಕಾಲ ನೇತ ಹಾಕಿಕೊಳ್ಳುವ ನಿರ್ಧಾರ ಮಾಡಿದ್ದೇನೆ. ಅನುಮತಿಕೊಡಬೇಕು'' ಎಂದು ಆತುರಪಟ್ಟು ನುಡಿದರು.

ಸಮಿತಿಯ ಸದಸ್ಯರೆಲ್ಲ ಅವಾಕ್ಕಾಗಿ ನೋಡುತ್ತಿದ್ದರು. ಗಾಂಧಿಯವರು ಈ ಬನ್ಸಾಲಿ ಮಹಾಶಯರನ್ನು ಸಮಾಧಾನ ಪಡಿಸುವ ಕೆಲಸಕ್ಕೆ ತೊಡಗಿದರು. ರಾಜಕಾರಣ ಚರ್ಚೆ ತಡೆಯಿತು. ಗಾಂಧಿಯವರ ರೀತಿ ತಿಳಿದಿದ್ದ ಸದಸ್ಯರೆಲ್ಲ ಒಬ್ಬೊಬ್ಬರಾಗಿ ಹೊರಗೆ ನಡೆದರು.

ಈ ಬನ್ಸಾಲಿ ಮಹಾಶಯರ ಮೇಲೆ ಗಾಂಧಿಯವರಿಗೆ ಅಪಾರ ಪ್ರೇಮ. ಅಹಮ್ಮದಾಬಾದ್ ರಾಷ್ಟ್ರೀಯ ವಿದ್ಯಾಲಯದ ಪ್ರಾಧ್ಯಾಪಕರಾಗಿದ್ದ ಇವರು, ಗಾಂಧಿಯವರ ಜೊತೆಯಲ್ಲಿ ಸೆರೆಮನೆವಾಸ ಅನುಭವಿಸುತ್ತಾ ಉಪವಾಸ ಮಾಡುತ್ತಾ ಬಂದಿದ್ದರು. ಗಾಂಧಿಯವರು ಒಮ್ಮೆ "ಮೌನ ಧಾರಣೆ ಹಿತಕರ" ಎಂದು ಉಪದೇಶಿಸಿದರು. ಈ ಮಹಾಶಯರು ಮರು ದಿವಸ ತಮ್ಮ ಬಾಯಿಯನ್ನು ಹಿತ್ತಾಳಿಯ ಸರಿಗೆಯಿಂದ ಹೊಲಿದುಕೊಂಡರು. ಗಾಂಧಿಯವರು ಇನ್ನೊಮ್ಮೆ "ಹುಲ್ಲುಸೊಪ್ಪುಗಳಲ್ಲಿ ಬಹಳ ಸತ್ವವಿದೆ. ನಾಲಿಗೆಯ ರುಚಿಗೆ ದಾಸರಾಗಬಾರದು" ಎಂದು ನುಡಿದರು. ನಮ್ಮ ಮಹಾಶಯರು ಹಸಿ ಗೋಧಿ ಹಿಟ್ಟು ಮತ್ತು ಕಹಿಬೇವು ಸೊಪ್ಪು ತಿಂದು ಜೀವಿಸಿದರು. "ಉಡುಗೆ-ತೊಡುಗೆಯು ಸಾದಾವಿದ್ದು, ರೋಮಕೂಪಗಳೂ ಗಾಳಿಯನ್ನು ಹೀರುವಂತಿರಬೇಕು" ಎಂದರು ಮಹಾತ್ಮರು. ಬನ್ಸಾಲಿಯವರು ದಿಗಂಬರರಾಗಿ ಊರಿಂದೂರಿಗೆ ನಡೆಯ ತೊಡಗಿದರು.

ಈ ವಿಚಿತ್ರ ಪ್ರಕೃತಿಯ ಬನ್ಸಾಲಿ ಮಹಾಶಯರನ್ನು ತುಂಬಾ ಮಮತೆಯಿಂದ ಕಾಣುತ್ತಿರುವ ಗಾಂಧಿಯವರ ಪ್ರಕೃತಿಯೂ ವಿಚಿತ್ರವಲ್ಲವೇ?

5. ಗಾಂಧಿಯವರ ಸಲಹೆ ಪಡೆಯುತ್ತಿದ್ದವರಲ್ಲಿ ಒಂದೆಡೆ ದೇಶದ ಮಂತ್ರಿಗಳು, ಪ್ರಧಾನ ಮಂತ್ರಿಗಳು ಇರುತ್ತಿದ್ದರು. ಇನ್ನೊಂದೆಡೆ ತಮ್ಮೊಳಗೆ ಜಗಳಾಡಿಕೊಂಡ ಅಣ್ಣ-ತಮ್ಮಂದಿರು, ಗಂಡ–ಹೆಂಡಿರು ಇರುತ್ತಿದ್ದರು. ಲೂಯಿಸ್ ಫಿಶರ್ ಎಂಬ ಒಬ್ಬ ಪತ್ರಿಕಾ ಪ್ರತಿನಿಧಿಯವರು ಗಾಂಧಿಯವರನ್ನು ನೋಡಲು ಆಶ್ರಮಕ್ಕೆ ಬಂದಿದ್ದರು. ಗಾಂಧಿಯವರು ಆಗ ಇಬ್ಬರು ಹರಿಜನ ದಂಪತಿಗಳ ಜಗಳದಲ್ಲಿ ಮಧ್ಯಸ್ಥಿಕೆ ವಹಿಸಿ ರಾಜಿ-ಪಂಚಾಯತಿಗೆ ನಡೆಯಿಸುತ್ತಿದ್ದರು.

ದೇಶ, ಲೋಕವೆಂದು ವ್ಯಕ್ತಿ-ಹಿತವನ್ನು ಅಲಕ್ಷಿಸುವುದು ಗಾಂಧಿಯವರ ರೀತಿಯಲ್ಲ.

6. 1946ನೇ ಮೇ 16ರಲ್ಲು ಬ್ರಿಟಿಷ್ ಮಂತ್ರಿಮಂಡಲದಿಂದ ಭಾರತದ ಸ್ವಾತಂತ್ರ್ಯ ಯೋಜನೆಯು ಹೊರಬಿತ್ತು. ಗಾಂಧಿಯವರು ನಾಲ್ಕು

ವರೆ ದಿನಗಳ ವರೆಗೆ ಅದನ್ನು ಪರಿಶೀಲಿಸಿ ಕೊನೆಗೆ ಹರಿಜನ ಪತ್ರಿಕೆಯಲ್ಲಿ ಒಂದೂ ಕಾಲು ಪುಟದ ಒಂದು ಲೇಖನ ಬರೆದು "ಯೋಜನೆಯು ಸ್ವೀಕಾರ ಯೋಗ್ಯ" ಎಂದು ತಮ್ಮ ಅನುಮತಿಯ ಮುದ್ರೆ ಒತ್ತಿದರು. ದೇಶ ವಿದೇಶ ಗಳ ದೊಡ್ಡ ದೊಡ್ಡ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನವಿದು.

ಇಷ್ಟು ಮಹತ್ವದ ಲೇಖನದ ಕೆಳಗಡೆಯೇ ನಮ್ಮ ಮಹಾತ್ಮರು ಮಾವಿನ ಗೊರಟಿನ ಮಹತ್ವವನ್ನು ವಿವರಿಸಿ "ಅದರ ಸದುಪಯೋಗ ಮಾಡಲು ಮರೆಯದಿರಿ" ಎಂದು ಬಿನ್ನವಿಸಿಕೊಂಡಿದ್ದರು.

ಮಾವಿನ ಗೊರಟಿನ ಸದುಪಯೋಗದ ಪ್ರಶ್ನೆಯು ಭಾರತದ ಸ್ವಾತಂತ್ರ್ಯದ ಪ್ರಶ್ನೆಗಿಂತ ಕಡಿಮೆ ತರವೆಂದು ಭಾವಿಸುವಿರಾ?

7. ತಮಗೆ ಬಂದ ಪತ್ರಗಳ ಖಾಲಿಕಾಗದ ಅಥವಾ ಗುಂಡುಸೂಜಿ ಗಳನ್ನು ಸಹ ಬಹಳ ಜತನದಿಂದ ಗಾಂಧಿಯವರು ತಮ್ಮ ಉಪಯೋಗದ ಬಗ್ಗೆ ಶೇಖರಿಸಿಡುತ್ತಿದ್ಧರು. ಒಮ್ಮೆ ಒಬ್ಬ ದಿಟ್ಟ ಆಂಗ್ಲ ತರುಣನು ಅವರನ್ನು ಪರಿಹಾಸ್ಯ ಮಾಡಿ ಬರೆದ ಒಂದು ಕವಿತೆಯನ್ನು ಅವರ ಕೈಗೆ ಕೊಟ್ಟನು. ಅದಕ್ಕೆ ಸಿಕ್ಕಿಸಿದ್ದ ಒಂದು ಗುಂಡುಸೂಜಿಯನ್ನು ನೋಡಿ, ಅವರು ಹರ್ಷ ಗೊಂಡರು. ಅದನ್ನು ತೆಗೆದುಬಿಟ್ಟು ಒಂದು ಕರಡಿಗೆಯಲ್ಲಿ ಭದ್ರವಾಗಿರಿಸಿ ದರು. ಕವಿತೆಯನ್ನು ಚೂರುಚೂರಾಗಿ ಹರಿಯ ತೊಡಗಿದರು. ಆ ಆಂಗ್ಲ ತರುಣನು "ಗಾಂಧೀ, ಆ ಕವಿತೆ ಓದಿರಿ, ಅದರಲ್ಲಿ ಸಾರವಿದೆ" ಎಂದು ವ್ಯಂಗ್ಯದ ನಗು ಬೀರಿದನು. ಗಾಂಧಿಯವರು "ಆಗಲಿ, ಅದರ ಸಾರವನ್ನು ಎತ್ತಿ ಕರಡಿಗೆಯೊಳಗೆ ಈ ಮೊದಲೇ ಮುಚ್ಚಿಟ್ಟಿದ್ದೇನೆ" ಎನ್ನುತ್ತಾ ಕಾಗದದ ಚೂರುಗಳನ್ನು ಕಸದ ಬುಟ್ಟಿಗೆ ಎಸೆದು ಬಿಟ್ಟರು.

ಹೀಗಿವೆ ಗಾಂಧಿಯವರ ಕೆಲವು ವಿಶಿಷ್ಟರೀತಿಗಳು.

Printed & Published by
Ajantha Printers & Publishers, Ltd.
COONDAPOOR.